# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 21-11-2023ರ ಮಂಗಳವಾರ, ಪೂರ್ವಾಹ್ನ 11-30 ಗಂಟೆಗೆ ನಡೆದ "ಐದನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿ.

<u>ಉಪಸ್ಥಿತರು</u>:

1. ಪ್ರೊ. ಎನ್.ಕೆ. ಲೋಕನಾಥ್ — ಕುಲಪತಿ ಹಾಗೂ ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ — ಸದಸ್ಯರು
   ಪ್ರೊ.ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು
   ಕಾಲೇಜು ಶಿಕ್ಷಣ ಇಲಾಖೆ
3. ಶ್ರೀ ಸುರೇಶ್. ಕೆ.ಎ.ಎಸ್ — ಸದಸ್ಯರು
   ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ಪ್ರೊ. ಟಿ.ಆರ್. ಮಾರುತಿ, ಡೀನರು, ಕಾನೂನು ನಿಕಾಯ, ಮಾ.ಗಂ.ಮೈ. — ಸದಸ್ಯರು
5. ಡಾ. ಟಿ.ಆರ್. ಚಂದ್ರಶೇಖರ್ — ಸದಸ್ಯರು
6. ಶ್ರೀ ಗೋಕುಲ್ ಗೋವರ್ಧನ್ — ಸದಸ್ಯರು
7. ಶ್ರೀಮತಿ ಸೌಮ್ಯ ಈರಪ್ಪ ಕೆ — ಸದಸ್ಯರು
8. ಡಾ. ಗಣೇಶ್.ಕೆ — ಸದಸ್ಯರು
9. ಡಾ. ಮುಜ್ಹೀದ ಬಾನು — ಸದಸ್ಯರು
10. ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) — ಸದಸ್ಯರು
11. ಶ್ರೀಮತಿ ಶೈಲಜ.ವಿ.ಆರ್. ಕೆ.ಎ.ಎಸ್ — ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ
12. ಶ್ರೀಮತಿ ರೇಖಾ ಕೆ.ಎಸ್., ಕೆ.ಎಸ್.ಎ.ಎಸ್., ಹಣಕಾಸು ಅಧಿಕಾರಿಗಳು — ವಿಶೇಷ ಆಹ್ವಾನಿತರು

<u>ಅನುಪಸ್ಥಿತರು</u>:

1. ಪ್ರೊ. ಯಜ್ಞಮೂರ್ತಿ ಶ್ರೀಕಾಂತ್, ಪ್ರಾಂಶುಪಾಲರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನೇಮಕಗೊಂಡಿರುವ ಯಜ್ಞಮೂರ್ತಿ ಶ್ರೀಕಾಂತ್, ಪ್ರಾಂಶುಪಾಲರು, (ಅನುಪಸ್ಥಿತರು) ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ (ಎನ್‌ಸಿಇಆರ್‌ಟಿ), ಮೈಸೂರು, ಡಾ. ಗಣೇಶ್.ಕೆ., ಪ್ರಾಂಶುಪಾಲರು, ಸೇಪಿಯಂಟ್ ವಾಣಿಜ್ಯ ಮತ್ತು ಆಡಳಿತ ಕಾಲೇಜು, ಕೆ.ಆರ್.ಎಸ್. ರಸ್ತೆ, ಮೇಟಗಳ್ಳಿ, ಮೈಸೂರು ಹಾಗೂ ಡಾ. ಮುಜ್ಹೀದ ಬಾನು, ಪ್ರಾಂಶುಪಾಲರು, ವಿದ್ಯಾ ವಿಕಾಸ, ಪ್ರಥಮ ದರ್ಜೆ ಕಾಲೇಜು, ಬನ್ನೂರು ರಸ್ತೆ, ಆಲನಹಳ್ಳಿ ಬಡಾವಣೆ, ಮೈಸೂರು, ಇವರುಗಳನ್ನು ಸಭೆಗೆ ಪರಿಚಯಿಸಿ ಸ್ವಾಗತಿಸಲಾಯಿತು.

ಮಾನ್ಯ ಕುಲಪತಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರುಗಳನ್ನು ಮತ್ತೊಮ್ಮೆ ಸ್ವಾಗತಿಸಿದರು ಹಾಗೂ ಮಾನ್ಯ ಕುಲಪತಿಗಳ ಅಪ್ಪಣೆಯ ಮೇರೆಗೆ ಕುಲಸಚಿವರು ಕಾರ್ಯಸೂಚಿಯನ್ನು ಮಂಡಿಸಿದರು.

<table>
<tr><th>ವಿಷಯ ಸಂಖ್ಯೆ</th><th>ವಿಷಯ ಸಂಕ್ಷಿಪ್ತವಾಗಿ</th></tr>
<tr><td colspan="2">ದಿನಾಂಕ: 13-10-2023ರಂದು ಜರುಗಿದ "ಸಿಂಡಿಕೇಟಿನ ನಾಲ್ಕನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ.<br><br>ಹಾಗೂ<br><br>ದಿನಾಂಕ: 18-10-2023ರಂದು ಜರುಗಿದ "103ನೇ ಘಟಿಕೋತ್ಸವದ ಸಿಂಡಿಕೇಟಿನ ವಿಶೇಷ ಸಭೆ"ಯನಡವಳಿಯನ್ನು ದೃಢೀಕರಿಸುವ ಬಗ್ಗೆ.</td></tr>
<tr><td colspan="2">ದಿನಾಂಕ 13-10-2023 ರಂದು ಜರುಗಿದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ಹಾಗೂ ದಿನಾಂಕ 18-10-2023 ರಂದು ಜರುಗಿದ "103ನೇ ಘಟಿಕೋತ್ಸವದ ಸಿಂಡಿಕೇಟಿನ ವಿಶೇಷ ಸಭೆ"ಯ ನಡವಳಿಗಳನ್ನು ಮತ್ತು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ದೃಢೀಕರಿಸಿತು.</td></tr>
<tr><td>ಸಾಮಾನ್ಯ ಸಭೆ<br>2023/5.1</td><td>27-10-2022ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ.</td></tr>
<tr><td></td><td>ಡಾ .ಚಂದ್ರಶೇಖರ್ ಅವರು ಮಾತನಾಡಿ 27-10-2023ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಒಂದು ವರ್ಷ ಒಂದು ತಿಂಗಳು ತಡವಾಗಿ ಸಭೆಗೆ ಸಲ್ಲಿಸಿರುತ್ತಿರುವುದರ ಬಗ್ಗೆ ಆಕ್ಷೇಪವನ್ನು ವ್ಯಕ್ತಪಡಿಸಿದರು. ಈಗಾಗಲೇ ಹಿಂದೆ ಹಲವಾರು ಸಿಂಡಿಕೇಟ್ ಸಭೆಗಳು ನಡೆದಿದ್ದು ಈ ವಿಷಯವು ಅಲ್ಲಿ ಪ್ರಸ್ತಾಪಿಸದೆ ಇರುವುದಕ್ಕೆ ಇದು ಸೂಕ್ಷ್ಮ ವಿಷಯವಾಗಿರಬಹುದು. ಇಷ್ಟು ದೊಡ್ಡ ಪ್ರಾಜೆಕ್ಟ್ ಹಣ ಪಾವತಿಸದೆ ಇರುವುದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು.<br><br>ಕುಲಸಚಿವರು ಮಾತನಾಡಿ ಹಿಂದೆ ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಲಾಗಿತ್ತು ಮತ್ತು ಹಣಕಾಸು ಸಮಿತಿಯಲ್ಲಿ ಮಂಡಿಸಿ, ಸದರಿ ವಿಷಯವನ್ನು ಮುಂದೂಡಲಾಯಿತು. ಮುಂದಿನ ಸಭೆಯಲ್ಲಿ ವಿವರವಾಗಿ ವಿಷಯವನ್ನು ಪ್ರಸ್ತಾಪಿಸುವುದಾದರೆ ಕಾರ್ಯಪಾಲಕ ಅಭಿಯಂತರರನ್ನು ಸಿಂಡಿಕೇಟ್ ಸಭೆಗೆ ಹಾಜರಾಗುವಂತೆ ಸೂಚಿಸಲಾಗುವುದೆಂದು ತಿಳಿಸಿದರು.<br><br>ಕುಲಪತಿಯವರು ಮಾತನಾಡಿ ಹಿಂದೆ ಪ್ರಭಾರ ಕುಲಪತಿಗಳು ಇದ್ದರೂ ವಿಷಯವನ್ನು ಪ್ರಸ್ತಾಪಿಸಿರುವುದಿಲ್ಲ. ಇದನ್ನು ವಿಮರ್ಶೆ ಮಾಡಿ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸುವುದಾಗಿ ಸಭೆಗೆ ತಿಳಿಸಿದರು. ವಿಷಯವು ಈಗ ಚರ್ಚೆಗೆ ಬಂದಿದೆ. ಹಿಂದೆ ತಮ್ಮ ಅನುಪಸ್ಥಿತಿಯಲ್ಲಿ ಹಲವಾರು ಸಿಂಡಿಕೇಟ್ ಸಭೆಗಳು ನಡೆದಿದ್ದರೂ ವಿಷಯವು ಪ್ರಸ್ತಾಪವಾಗಿರುವುದಿಲ್ಲ ಎಂದು ತಿಳಿಸಿದರು.<br><br>ಡಾ.ಚಂದ್ರಶೇಖರ್ರವರು ಮಾತನಾಡಿ ವಿಷಯವನ್ನು ಮರುಪರಿಶೀಲನೆ ಮಾಡಿ ಹಾಗೂ ಕಾರ್ಯಪಾಲಕ ಅಭಿಯಂತರರನ್ನು ಮುಂದಿನ ಸಭೆಯಲ್ಲಿ ಹಾಜರಾಗುವಂತೆ ತಿಳಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.</td></tr>
<tr><td>ತೀರ್ಮಾನ</td><td>ಮುಂದೂಡಲಾಯಿತು</td></tr>
<tr><td>ಸಾಮಾನ್ಯ ಸಭೆ<br>2023/5.2</td><td>Centre for Study of Social Exclusion and Inclusive Police (CSSEIP) ಕೇಂದ್ರದಲ್ಲಿನ ಬೋಧಕರ ಸೇವೆಯನ್ನು ಮುಂದುವರೆಸುವ ಬಗ್ಗೆ.</td></tr>
<tr><td></td><td>ಮಾನ್ಯ ಕುಲಪತಿಯವರು ಮಾತನಾಡಿ Centre for Study of Social Exclusion and Inclusive Police (CSSEIP) ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರಿಗೆ ಯುಜಿಸಿಯಿಂದ 2022-23ನೇ ಸಾಲಿನ ವೇತನವು ಇನ್ನೂ ಬಿಡುಗಡೆಯಾಗಿರುವುದಿಲ್ಲ. ಆದರೂ ವಿಶ್ವವಿದ್ಯಾನಿಲಯದಿಂದ ಈ ವೇತನವನ್ನು ಅಧ್ಯಾಪಕರುಗಳಿಗೆ ನೀಡಲಾಗಿದೆ. ಯುಜಿಸಿಯಿಂದ ಎರಡು ಶೈಕ್ಷಣಿಕ ಸಾಲಿಗೆ ಹಣ ಬಂದಿಲ್ಲದಿರುವುದರಿಂದ ಇವರನ್ನು ಹೇಗೆ ಮುಂದುವರಿಸುವುದು ಎಂದು ಸಭೆಯ ಗಮನಕ್ಕೆ ತಂದರು. ಯುಜಿಸಿಯಿಂದ ವೇತನ ಕೊಡದೆ ವಿಶ್ವವಿದ್ಯಾನಿಲಯದಿಂದ</td></tr>
</table>

| | |
|---|---|
| | ಕೊಡಲು ಸಾಧ್ಯವಾಗುವುದಿಲ್ಲ. ಯುಜಿಸಿಯಿಂದ ಕಳೆದ ವರ್ಷದ ಹಣ ಬಂದ ಮೇಲೆ ಅವರನ್ನು ಮುಂದುವರಿಸಬಹುದೆಂದು ತಿಳಿಸಿದರು.<br><br>**ಡಾ. ಚಂದ್ರಶೇಖರ್** ಅವರು ಮಾತನಾಡಿ ಅಧ್ಯಾಪಕರುಗಳನ್ನು ವೇತನ ರಹಿತವಾಗಿ 2023-24ನೇ ಶೈಕ್ಷಣಿಕ ಸಾಲಿನವರೆಗೆ ಮುಂದುವರೆಸಿ, ಯುಜಿಸಿಯಿಂದ ಹಣ ಬಿಡುಗಡೆಯಾದ ನಂತರ ವೇತನವವನ್ನು ನೀಡಬಹುದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ CSSEIP ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಇಬ್ಬರು ಅಧ್ಯಾಪಕರುಗಳಾದ ಡಾ. ನಂಜುಂಡ ಹಾಗೂ ಡಾ. ಸಿದ್ದರಾಜುರವರು ತುಂಬಾ ಚಟುವಟಿಕೆಯುಳ್ಳ ಅಧ್ಯಾಪಕರುಗಳು ಹಾಗೂ ಸ್ಕಾಲರ್ಸ್ ಸಹ ಆಗಿದ್ದಾರೆ. ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಹೊರಗುಳಿಯುವಿಕೆಯ ಬಗೆಗೆ ಸಾಕಷ್ಟು ಅಧ್ಯಯನಗಳನ್ನು ನಡೆಸಿದ್ದಾರೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಕೊಡುವ ಅಧ್ಯಯನಗಳೆರಡನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ನೀಡುವಂತಹ ಕೆಲಸಗಳನ್ನು ಸಹ ಮಾಡುತ್ತಿದ್ದಾರೆ. ಸಾಕಷ್ಟು ಕಡಿಮೆ ಸಂಬಳದಲ್ಲಿ ಹಲವು ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಆದ್ದರಿಂದ ಇವರಿಗೆ ಷರತ್ತುಬದ್ಧವಾಗಿ ವೇತನವವನ್ನು ನೀಡಬಹುದೆ ಎಂಬುದರ ಬಗ್ಗೆ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕೋರಲಾಗಿದೆ ಎಂದು ತಿಳಿಸಿದರು.<br><br>ಡಾ. ಚಂದ್ರಶೇಖರ್ ಅವರು ಮಾತನಾಡಿ ಯುಜಿಸಿಗೆ ಒಂದು ಪತ್ರ ಬರೆದು ವಿಶ್ವವಿದ್ಯಾನಿಲಯಕ್ಕೆ ಹೊರೆ ಆಗದಂತೆ ಷರತ್ತು ಹಾಕಿ ಅವರ ಸೇವೆಯನ್ನು ಮುಂದುವರಿಸಬಹುದೆಂದು ತಿಳಿಸಿದರು.<br><br>ಹಣಕಾಸು ಅಧಿಕಾರಿಯವರು ಮಾತನಾಡಿ ಯುಜಿಸಿಯಿಂದ ವೇತನವು ಬಿಡುಗಡೆಯಾಗದಿದ್ದಲ್ಲಿ ಅವರಿಂದ ಯಾವ ರೀತಿಯಿಂದಲೂ ವಸೂಲಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ 2022-23ನ ವರ್ಷದ ವೇತನ ಮಾತ್ರ ಬಾಕಿ ಇರುವುದು ಹಿಂದೆ ಎಂದು ಈ ರೀತಿ ತಡವಾಗಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತಂದರು ಹಾಗೂ ಅವರು ವೇತನವವನ್ನು ಕೇಳುತ್ತಾ ಇಲ್ಲಾ ಅವರ ಬೋಧಕ ಸೇವೆಯನ್ನು ಮುಂದುವರೆಸುವಂತೆ ಕೋರುತ್ತಾ ಇದ್ದಾರೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ತಿಳಿಸಿದರು.<br><br>ಶ್ರೀ ಸುರೇಶ್ ಅವರು ಮಾತನಾಡಿ ಯುಜಿಸಿಯವರ ಕಮಿಟ್‌ಮೆಂಟ್ ಇರುವುದರಿಂದ ಅಧ್ಯಾಪಕರಿಗೆ ಸಂಬಳ ನಿಲ್ಲಿಸಿ ಸದರಿಯವರ ಸೇವೆಯನ್ನು ಮುಂದುವರಿಸಬಹುದೆಂದು ಅಭಿಪ್ರಾಯಿಸಿದರು.<br><br>ಡಾ. ಚಂದ್ರಶೇಖರ್ ಅವರು ಮಾತನಾಡಿ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಾಗದಂತೆ ಅವರ ಸೇವೆಯನ್ನು ಮುಂದುವರಿಸಬಹುದೆಂದು ಅಭಿಪ್ರಾಯಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ 2022-23ನೇ ಸಾಲಿನ ವೇತನವವನ್ನು ವಿಶ್ವವಿದ್ಯಾನಿಲಯವು ಭರಿಸಿರುವುದರಿಂದ, ಯುಜಿಸಿಯಿಂದ ಈ ಮೊತ್ತವು ಬಂದ ನಂತರ ಅವರಿಗೆ ವೇತನ ನೀಡಲು ಸಾಧ್ಯವಾಗುವುದೆಂದು ತಿಳಿಸಿದರು. ಹಾಗೂ ಯಾವುದೇ ಸ್ಕೀಂ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರೆ ಅಂತಹವರಿಗೆ ಆ ಸ್ಕೀಂನಿಂದ ಹಣಬಂದಾಗ ಮಾತ್ರ ಸಂದಾಯ ಮಾಡಲು ಕ್ರಮವಹಿಸಬಹುದಾಗಿದೆ ಎಂದು ತಿಳಿಸಿದರು.<br><br>ಡಾ. ಮಾರುತಿಯವರು ಮಾತನಾಡಿ ಸಂಸ್ಥೆಯು ಒಳ್ಳೆಯ ಕೆಲಸಗಳನ್ನು ನಿರ್ವಹಿಸುತ್ತಿರುವುದರಿಂದ ಅವರುಗಳನ್ನು ಮುಂದುವರಿಸುವಂತೆ ಕೋರಿದರು. |
| **ತೀರ್ಮಾನ** | ಈ ವಿಷಯವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2023/5.3 | ಹಣಕಾಸು ಸಮಿತಿಗೆ ಒಬ್ಬರು ಸಿಂಡಿಕೇಟ್ ಸದಸ್ಯರನ್ನು ನಾಮನಿರ್ದೇಶನ ಮಾಡಿರುವ ವಿಷಯವನ್ನು ಅನುಸಮರ್ಥನೆಗಾಗಿ. |
| ತೀರ್ಮಾನ | ಶ್ರೀ ಎಂ.ಬಿ.ಗಪ್ಪಣ್ಣ, ಇವರ ಸಿಂಡಿಕೇಟ್ ಸದಸ್ಯತ್ವವು ದಿನಾಂಕ 3-10-2023ರಂದು ಮುಕ್ತಾಯಗೊಂಡು ತೆರವಾದ ಹಣಕಾಸು ಸಮಿತಿಯ ಸದಸ್ಯ ಸ್ಥಾನಕ್ಕೆ ಶ್ರೀ ಗೋಕುಲ್ ಗೋವರ್ಧನ್, ಸಿಂಡಿಕೇಟ್ ಸದಸ್ಯರು ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 32(1)(v)ರ ಅನ್ವಯ ಹಾಗೂ ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಹಣಕಾಸು ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿರುವುದನ್ನು ಸಿಂಡಿಕೇಟ್ ಸಭೆಯು ಅನಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.4 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿರುವ ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| | ಡಾ. ಚಂದ್ರಶೇಖರ್ ಅವರು ಮಾತನಾಡಿ ಕ್ರಿಶ್ಚಿಯಾನಿಟಿ ಪೀಠಕ್ಕೆ Dr. Fr. Anthony Dhas Prakasam SAC ಅಥವಾ Dr.Fr.Joseph Marie ಇವರಿಬ್ಬರಲ್ಲಿ ಯಾರಾದರೂ ಒಬ್ಬರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಬಹುದೆಂದು ತಿಳಿಸಿದರು. |
| ತೀರ್ಮಾನ | ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.5 | ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸ್ಥಾಪಿಸಲಾಗಿರುವ ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗ್ಗೆ. |
| | ಡಾ. ಚಂದ್ರಶೇಖರ್ ಅವರು ಮಾತನಾಡಿ ಡಾ. ಹನುಮ ನಾಯಕ ಒಂದು ವರ್ಷ ಕೆಲಸ ಮಾಡಿದ್ದಾರೆ. ಅರ್ಧಂಬರ್ಧ ಕೆಲಸ ಆಗಿದೆ. ಇವರನ್ನು ಮತ್ತೊಂದು ವರ್ಷಕ್ಕೆ ನೇಮಕ ಮಾಡಿದರೆ ಉಳಿದ ಕಾರ್ಯವನ್ನು ಪೂರ್ಣಗೊಳಿಸಬಹುದೆಂದು ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರು ಹೇಳಿದ್ದಾರೆ ಎಂದು ತಿಳಿಸಿದರು.<br>ಮಾನ್ಯ ಕುಲಪತಿಯವರು ಮಾತನಾಡಿ ಒಂದು ಸಲ ಕೊಟ್ಟಿರುವವರಿಗೆ ಮತ್ತೆ ಕೊಡುವುದು ಬೇಡ ಬೇರೆಯವರಿಗೆ ಕೊಡುವುದು ಸೂಕ್ತವೆಂದು ತಿಳಿಸಿದರು. |
| ತೀರ್ಮಾನ | ಶ್ರೀ ಎನ್. ರಾಚಯ್ಯ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.6 | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಜೆ.ಎಲ್.ಬಿ. ರಸ್ತೆ, ಮೈಸೂರು-570005 ಇವರಿಗೆ ಹೊಸದಾಗಿ Physics, Chemistry, Mathematics, Botany, Microbiology ಮತ್ತು Biochemistry ವಿಷಯಗಳಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಸ್ವಾಯತ್ತ), ಜೆ.ಎಲ್.ಬಿ. ರಸ್ತೆ, ಮೈಸೂರು ಈ ಕಾಲೇಜಿನವರು ಹೊಸದಾಗಿ Physics, Chemistry, Mathematics, Botany, ~~Applied Zoology~~, Microbiology ಮತ್ತು Biochemistry ವಿಷಯಗಳಲ್ಲಿ ಪಿಎಚ್.ಡಿ ಪದವಿಗಾಗಿ ಸಂಶೋಧನೆ ನಡೆಸುವ ಸಂಬಂಧ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/5.7 | Seemore Education Institute ದಕ್ಷ ಕಾಲೇಜು ಆವರಣ CA-40, ಬೆಳವಾಡಿ ಹತ್ತಿರ, ಹೂಟಗಳ್ಳಿ, ಇಲವಾಲ ಹೋಬಳಿ, ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 05 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ನೀಡಿರುವ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | Seemore Education Institute, ದಕ್ಷ ಕಾಲೇಜ ಆವರಣ, CA-40, ಬೆಳವಾಡಿ ಹತ್ತಿರ, ಹೂಟಗಳ್ಳಿ, ಇಲವಾಲ ಹೋಬಳಿ, ಮೈಸೂರು ಈ ಸಂಸ್ಥೆಗೆ Specialized course ಅಡಿಯಲ್ಲಿ 1. B.Des. (Visual Communication & Digital Design) 2. B.Des. (Digital Product Design (Advanced UI/UX) 3. B.Des. (Game Art & Design) 4. M.Des. (Advertising Design and Digital Communication) 5. M.Des. (Creativity Innovation and Design)ಈ ಐದು ಹೊಸ ಕೋರ್ಸ್‌ಗಳನ್ನು 40 ಸಂಖ್ಯಾಮಿತಿಯೊಂದಿಗೆ ಪ್ರಾರಂಭಿಸಲು ಅನುಮತಿ ನೀಡಿ ಅಧಿಸೂಚನೆ ಹೊರಡಿಸಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.8 | ಸಾಂತ್ವನ ಟ್ರಸ್ಟ್ ಸಂಸ್ಥೆಯಿಂದ ಪುನರ್‌ವಸತಿ ಕೇಂದ್ರ ಸ್ಥಾಪಿಸಲು ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹವನ್ನು ನೀಡುವ ಬಗ್ಗೆ. |
| | **ಡಾ. ಟಿ.ಆರ್. ಚಂದ್ರಶೇಖರ್** ಅವರು ಮಾತನಾಡಿ ಸಾಂತ್ವನ ಟ್ರಸ್ಟ್ ಸಂಸ್ಥೆಯು ಸಾಮಾಜಿಕ ಹಿತದೃಷ್ಟಿಯಿಂದ ಸಾಮಾಜಿಕವಾಗಿ ಒಳ್ಳೊಳ್ಳೆಯ ಕೆಲಸಗಳನ್ನು ಮಾಡುತ್ತಿದೆ. ಆದರೆ ವಿಶ್ವವಿದ್ಯಾನಿಲಯದ ಹಿತದೃಷ್ಟಿ ಹಾಗೂ ನಮ್ಮ ವಿದ್ಯಾರ್ಥಿಗಳ, ಬೋಧಕ-ಬೋಧಕೇತರರ ಹಿತದೃಷ್ಟಿಗಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಈಗಾಗಲೇ ವಸತಿಗೃಹಗಳಿಗಾಗಿ ಕೋರಿ ಎಷ್ಟೋ ಅರ್ಜಿಗಳು ಬರುತ್ತಿವೆ. ಜೊತೆಗೆ ವಿಶ್ವವಿದ್ಯಾನಿಲಯದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚು ಒತ್ತನ್ನು ಕೊಡಬೇಕಾಗಿರುವುದರಿಂದ ಬೇರೆಯ ಸಂಸ್ಥೆಗಳಿಗೆ ವಿಶ್ವವಿದ್ಯಾನಿಲಯದ ಆವರಣಕ್ಕೆ ಪ್ರವೇಶವನ್ನು ನೀಡಿದರೆ ಶೈಕ್ಷಣಿಕ ಪ್ರಗತಿಗೆ ತೊಂದರೆಯಾಗಬಹುದು. ಸಂಸ್ಥೆಯವರ ಉದ್ದೇಶ ಸಾಮಾಜಿಕ ಹಿತದೃಷ್ಟಿಯಿಂದ ಒಳ್ಳೆಯದೆ ಇದ್ದರೂ ಇದೊಂದು ಬಾರಿ ನಾವು ಈ ಸಂಸ್ಥೆಗೆ ಅವಕಾಶ ನೀಡಿದ್ದಲ್ಲಿ ಬೇರೆಯ ಸಂಘ-ಸಂಸ್ಥೆಗಳು ನಮಗೂ ಸ್ಥಳಾವಕಾಶವನ್ನು ನೀಡಿ ಎಂದು ಬರಬಹುದು. ಆದ್ದರಿಂದ ಇವುಗಳಿಗೆಲ್ಲಾ ಆಸ್ಪದವನ್ನು ನೀಡಬಾರದೆಂದು ಹಾಗೂ ಸರ್ಕಾರದಿಂದ ಆದೇಶ ಇದ್ದಲ್ಲಿ ಮತ್ತು ಸರ್ಕಾರದ ಸಂಘ ಸಂಸ್ಥೆಗಳು ಕೋರಿದ ಸಂದರ್ಭದಲ್ಲಿ ಅನಿವಾರ್ಯತೆಯನ್ನು ಪರಿಶೀಲಿಸಿ ನೀಡಬೇಕಾಗುತ್ತದೆ ಎಂದು ತಿಳಿಸಿದರು.<br><br>ಶ್ರೀ ಸುರೇಶ್ ಅವರು ಮಾತನಾಡಿ ಈ ಸಂಸ್ಥೆಯು ಖಾಸಗಿ ಸಂಸ್ಥೆ ಆಗಿರುವುದರಿಂದ ಇಂತಹ ಸಂಸ್ಥೆಯವರು ಮೊದಲು ಇಂತಿಷ್ಟೆ ಚಟುವಟಿಕೆಗಳನ್ನು ನಡೆಸುವುದಾಗಿ ತಿಳಿಸಿ ನಂತರ ಬೇರೆ ಬೇರೆಯ ಚಟುವಟಿಕೆಗಳು ಆರಂಭಗೊಂಡಂತಹ ಸಂದರ್ಭದಲ್ಲಿ ತೊಂದರೆಯಾಗಬಹುದು. ನಮ್ಮ ವಿಶ್ವವಿದ್ಯಾನಿಲಯವು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ್ದು ಚಾರಿಟಬಲ್ ಸಂಸ್ಥೆಯವರು ಬಾಡಿಗೆ ನೀಡುವರು ಎಂಬ ಕಾರಣಕ್ಕೆ ಅವರಿಗೆ ಬಾಡಿಗೆ ನೀಡಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.<br><br>ಡಾ. ಚಂದ್ರಶೇಖರ್ ಅವರು ಮಾತನಾಡಿ ಇಂತಹ ಯಾವುದೇ ಸಂಸ್ಥೆಯವರು ಶಿಕ್ಷಣಕ್ಕೆ ಸಂಬಂಧಿಸಿದ್ದರೆ ಹಾಗೂ ಅದರ ಅನಿವಾರ್ಯತೆಗೆ ಅನುಗುಣವಾಗಿ ಕೂಲಂಕಷವಾಗಿ ಪರಿಶೀಲಿಸಿದ ನಂತರ ನೀಡಬಹುದು. ಮುಂದೆ ಯಾವುದೇ ಸಾಮಾಜಿಕ ಚಟುವಟಿಕೆಗಳಿಗೆ ಕೋರಿಕೊಂಡು ಬಂದಲ್ಲಿ ಅವುಗಳನ್ನು ನಿರಾಕರಿಸಬಹುದೆಂದು ಹಾಗೂ ಸರ್ಕಾರದ ಆದೇಶ ಏನಾದರೂ ಇದ್ದಲ್ಲಿ ಅವುಗಳನ್ನು ಪರಿಶೀಲಿಸಿ ನೀಡಬಹುದೆಂದು ಸೂಚಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಇದೇ ರೀತಿ ಸಾಮಾಜಿಕ ಸಂಸ್ಥೆಗಳಿಗೆ ನೀಡುತ್ತಾ ಇದ್ದರೆ ಬೇರೆ ಸಂಸ್ಥೆಗಳು ವಸತಿಗೃಹಗಳನ್ನು ಕೇಳಬಹುದು. |

| | |
|---|---|
| | ಮೊದಲು ಕೊಟ್ಟಿರುವುದರಿಂದ ಇಂತಿಷ್ಟು ವರ್ಷಗಳಿಗೆ ಮತ್ತೊಮ್ಮೆ ನೀಡಿ ಎಂದು ಸಹ ಕೇಳುವ ಸಂಭವವಿರುತ್ತದೆ. ಆದ್ದರಿಂದ ಖಾಸಗಿ ಸಂಸ್ಥೆಗಳಿಗೆ ಯಾವುದೇ ವಸತಿಗೃಹಗಳನ್ನು ಹಾಗೂ ಆವರಣದಲ್ಲಿ ಇತರೆ ಸಾಮಾಜಿಕ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡಬಾರದೆಂದು ನಿಯಮಾವಳಿಯನ್ನು ರಚಿಸಲು ಸೂಚಿಸಿದರು. |
| ತೀರ್ಮಾನ | ಯಾವುದೇ ಖಾಸಗಿ ಸಂಘ-ಸಂಸ್ಥೆಗಳು ವಸತಿಗೃಹಗಳನ್ನು ಕೋರಿಕೊಂಡು ಬಂದಲ್ಲಿ ಅವರಿಗೆ ವಸತಿಗೃಹವನ್ನು ನೀಡಬಾರದೆಂದು ಜೊತೆಗೆ ಸದರಿ ವಿಷಯಕ್ಕೆ ನಿಯಮಾವಳಿಯನ್ನು ರಚಿಸಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2023/5.9 | 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳು. |
| | ಹಣಕಾಸು ಅಧಿಕಾರಿಯವರು ಮಾತನಾಡಿ 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಪತ್ರದ ಬಗ್ಗೆ ಸವಿವರವಾಗಿ ವಿವರಿಸಿದರು.<br>ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯನ್ನು ಸಭೆಯ ಹಿಂದಿನ ದಿನ ಕಳುಹಿಸಿದರೆ ಕೂಲಂಕಷವಾಗಿ ಪರಿಶೀಲಿಸಿ ಅದರ ಬಗ್ಗೆ ಸಮಗ್ರವಾದ ಮಾಹಿತಿಯನ್ನು ಪಡೆಯಲು ಅಥವಾ ಅರಿಯಲು ಸಾಧ್ಯವಾಗುವುದಿಲ್ಲ. ಜೊತೆಗೆ ನಮ್ಮದೇ ಆದ ಕೆಲಸ ಕಾರ್ಯಗಳು ಇರುವುದರಿಂದ ಕಾರ್ಯಸೂಚಿಯನ್ನು ಐದು ಅಥವಾ ಮೂರು ದಿನಗಳ ಮುಂಚಿತವಾಗಿ ನೀಡಬೇಕೆಂದು ಸಭೆಗೆ ತಿಳಿಸಿದರು.<br>ಹಣಕಾಸು ಅಧಿಕಾರಿಯವರು ಮಾತನಾಡಿ 2021-22 ಮತ್ತು 2022-23ನೇ ಸಾಲಿನ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಹಣಕಾಸು ಸಮಿತಿಯಲ್ಲಿ ಮಂಡಿಸಲಾಗಿದೆ. ಹಣಕಾಸು ಸಮಿತಿಯು ಅನುಮೋದಿಸಿದೆ. ಈಗ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/5.10 | Specialized Programmeಅಡಿಯಲ್ಲಿನ ಅಧ್ಯಯನ ಮಂಡಳಿಗಳ ರಚನೆ ಬಗ್ಗೆ ಅನುಸಮರ್ಥನೆಗಾಗಿ. |
| ತೀರ್ಮಾನ | Central Institute of Petrochemicals Engineering & Technology (CIPET), #437/A, Hebbal Industrial Area, Mysore ಸಂಸ್ಥೆಗೆ M.Sc (Polymer Science) (PG) ಹಾಗೂ Seemore Education Institute, Daksha College Campus, # CA-40, near Belawadi, Hootagalli, Yelawala Hobli, Mysuruಸಂಸ್ಥೆಗೆ 1. B.Des. Hons. (Visual Communication & Digital Design) 2. B.Des. Hons. (Digital Product Design (Advanced UX) 3. B.Des. Hons. (Game Art & Design) 4. M.Des. (Advertising Design and Digital Communication) 5. M.Des. (Creativity Innovation and Design) (CB) ಕೋರ್ಸ್‌ಗಳಿಗೆ ಪಠ್ಯಕ್ರಮಗಳನ್ನು ಸಿದ್ಧಪಡಿಸುವ ಸಂಬಂಧ ಮಾನ್ಯ ಕುಲಪತಿಯವರ ಆದೇಶಾನುಸಾರ ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಅಧ್ಯಯನ ಮಂಡಳಿಗಳನ್ನು ರಚಿಸಿ, ಅಧಿಸೂಚನೆಗಳನ್ನು ಹೊರಡಿಸಲಾಗಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.11 | Empanelment of University Advocates-A requisition submitted by Sri N. Mahadevaswamy, Advocate, Mysuru to consider his candidature for empanelment to the Panel of University Advocates-reg. |

| | |
|---|---|
| | **ಶ್ರೀ ಗೋಕುಲ್ ಗೋವರ್ಧನ್**ರವರು ಮಾತನಾಡಿ ಈಗ ಇರುವವರು ಹಿರಿಯ ವಕೀಲರುಗಳಾಗಿದ್ದು ಇವರುಗಳಿಗೆ ಕೇಸ್ ಇಲ್ಲದೆ ಇರುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆ ಇದ್ದರೆ ವಕೀಲರನ್ನು ತೆಗೆದುಕೊಳ್ಳಬಹುದು. ಈಗ ಅವಶ್ಯಕತೆ ಇಲ್ಲವೆಂದು ತಿಳಿಸಿದರು.<br><br>**ಪ್ರೊ. ಮಾರುತಿ** ಅವರು ಮಾತನಾಡಿ ವಿಶ್ವವಿದ್ಯಾನಿಲಯದಿಂದ ಅಧಿಸೂಚನೆ ಹೊರಡಿಸಿ ಅರ್ಜಿಯನ್ನು ಕರೆದು ವಕೀಲರನ್ನು ತೆಗೆದುಕೊಳ್ಳಬಹುದೆಂದು ತಿಳಿಸಿದರು. |
| **ತೀರ್ಮಾನ** | ವಕೀಲರನ್ನು ನೇಮಕ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/5.12** | Retirement of Post-Graduate Teachers during the Calendar Year-2024. |
| **ತೀರ್ಮಾನ** | The Syndicate approved the teachers working in the Post-Graduate Department of Studies to retire on attaining the age of superannuation during the calendar year 2024 and also for re-employment on contractual basis, if required till the end of respective semester. |
| **ಸಾಮಾನ್ಯ ಸಭೆ 2023/5.13** | ಅಧಿಕಾರಿ/ಅಧ್ಯಾಪಕೇತರ ಉದ್ಯೋಗಿಗಳು ಈಗಾಗಲೇ ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧಿಕಾರಿ ಮತ್ತು ಉದ್ಯೋಗಿಗಳು ವೈಯಕ್ತಿಕವಾಗಿ ಅವರುಗಳ ಹಕ್ಕಿನಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಈಗಾಗಲೇ ವಿದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |

| ಕ್ರ. ಸಂ | ಉದ್ಯೋಗಿಯ ಹೆಸರು ಮತ್ತು ಹುದ್ದೆ | ಕಾರ್ಯನಿರ್ವಹಿಸುತ್ತಿರುವ ಕಛೇರಿ/ವಿಭಾಗ | ರಜೆ ಅವಧಿ | ವಿದೇಶದ ಹೆಸರು |
|---|---|---|---|---|
| 01 | ಡಾ.ಆರ್.ಜೆರ್ರಿ ಆರೋಕ್ಯಮೇರಿ ಅಧೀಕ್ಷಕರು | ವಿ.ವಿ.ಲಲಿತ ಕಲೆಗಳ ಕಾಲೇಜು ಮಾಗಂ, ಮೈಸೂರು | 9.9.2023 ರಿಂದ 7.11.2023 | ಕೆನಡ |
| 02 | ಶ್ರೀಮತಿ ನೇತ್ರಾ .ಎಸ್ ಅಧೀಕ್ಷಕರು | ಆಡಳಿತ ವಿಭಾಗ ಮೈ.ವಿ.ವಿ., ಮೈಸೂರು | 31.10.2023 ರಿಂದ 10.11.2023 | ದುಬೈ |
| 03 | ಶ್ರೀಮತಿ ರತ್ನ.ಆರ್ ಅಧೀಕ್ಷಕರು | ಹಣಕಾಸು ವಿಭಾಗ ಮೈ.ವಿ.ವಿ., ಮೈಸೂರು | 20.11.2023 ರಿಂದ 24.11.2023 | ದುಬೈ |

| | |
|---|---|
| **ಸಾಮಾನ್ಯ ಸಭೆ 2023/5.14** | ಪ್ರೊ. ಸಿ. ನಾಗಣ್ಣ, ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಅವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಕೋರಿರುವ ಬಗ್ಗೆ. |
| | **ಡಾ. ಚಂದ್ರಶೇಖರ್** ಅವರು ಮಾತನಾಡಿ ಪ್ರೊ. ಸಿ. ನಾಗಣ್ಣ ಅವರಿಗೆ ಈಗಾಗಲೇ 70 ವರ್ಷ ಪೂರ್ಣಗೊಂಡಿರುವುದರಿಂದ ಅವರನ್ನು ಮತ್ತೆ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು. |
| **ತೀರ್ಮಾನ** | ಪ್ರೊ. ಸಿ. ನಾಗಣ್ಣ ಅವರಿಗೆ 70 ವರ್ಷ ಪೂರ್ಣಗೊಂಡಿರುವುದರಿಂದ ಅವರನ್ನು ಮತ್ತೆ ಒಂದು ವರ್ಷದ ಅವಧಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ನೇಮಕ ಮಾಡಲು ಸಾಧ್ಯವಾಗುವುದಿಲ್ಲವೆಂದು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2023/5.15 | ವಿಶ್ವವಿದ್ಯಾನಿಲಯದ ವಸತಿಗೃಹಗಳನ್ನು ಹಂಚಿಕೆ ಮಾಡುವ ಬಗ್ಗೆ. |
| | **ಡಾ. ಚಂದ್ರಶೇಖರ್** ಅವರು ಮಾತನಾಡಿ ಮಾನವೀಯತೆ ಆಧಾರದ ಮೇಲೆ (on medical ground) 10% ವಸತಿ ಗೃಹಗಳನ್ನು ಹಂಚಿಕೆ ಮಾಡಬಹುದೆಂದು ತಿಳಿಸಿದರು.<br>**ಮಾನ್ಯ ಕುಲಪತಿಗಳು** ಮಾತನಾಡಿ ವಸತಿ ಗೃಹಗಳಿಗೆ ವಿಶ್ವವಿದ್ಯಾನಿಲಯದಿಂದ ಮೂಲಭೂತ ಸೌಲಭ್ಯಗಳಾದ ನೀರು ಮತ್ತು ವಿದ್ಯುತ್ ಸೌಲಭ್ಯಗಳನ್ನು ಒದಗಿಸಲಾಗುವುದು. ಆದರೆ ಈಗ ಪ್ರಸ್ತುತ ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದೆ ಇರುವುದರಿಂದ ವಸತಿ ಗೃಹಗಳನ್ನು ದುರಸ್ತಿ ಮಾಡಿಸಲು ಸಾಧ್ಯವಾಗುವುದಿಲ್ಲ. ಯಾರಿಗೆ ವಸತಿ ಗೃಹ ಹಂಚಿಕೆಯಾಗುವುದೋ ಅವರೇ ದುರಸ್ತಿಕಾರ್ಯವನ್ನು ಮಾಡಿಸಿಕೊಳ್ಳಬೇಕೆಂದು ತಿಳಿಸಿದರು. |
| ತೀರ್ಮಾನ | ವಿಶ್ವವಿದ್ಯಾನಿಲಯದ ವಸತಿಗೃಹಗಳನ್ನು ಹಂಚಿಕೆ ಮಾಡುವ ವಿವೇಚನಾಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.16 | ಡಾ. ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವ ಕುರಿತು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗೆಗೆ. |
| ತೀರ್ಮಾನ | ಡಾ. ಸಿ. ಸುಮಂಗಲ, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ : 26-10-2023 ರಿಂದ 31-12-2023ರವರೆಗೆ ಸ್ವಂತ ಕೆಲಸ ನಿಮಿತ್ತ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಈಗಾಗಲೇ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.17 | ಡಾ. ಆರ್.ವಿದ್ಯಾ, ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ನೆದರ್‌ಲ್ಯಾಂಡ್ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವ ಕುರಿತು ಸಿಂಡಿಕೇಟ್ ಸಭೆಯ ಅನುಸಮರ್ಥನೆ ಪಡೆಯುವುದರ ಬಗೆಗೆ. |
| ತೀರ್ಮಾನ | ಡಾ. ಆರ್.ವಿದ್ಯಾ, ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 19-9-2023 ರಿಂದ 23-10-2023ರವರೆಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ನೆದರ್‌ಲ್ಯಾಂಡ್ ದೇಶಕ್ಕೆ ಹೋಗಿಬರಲು ಈಗಾಗಲೇ ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.18 | ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ ಸಂಶೋಧನಾರ್ಥಿಗಳು ಹಾಗೂ ತಾತ್ಕಾಲಿಕ ನೋಂದಣಿ ಪಡೆದ (Provisional Registration Certificate) ಸಂಶೋಧನಾರ್ಥಿಗಳು ಭೋಜನ ಪಡೆದಿರುವ ಮೆಸ್ ವೆಚ್ಚದ ರೂ. 23,48,400/-ಗಳನ್ನು ವಸೂಲಾತಿ ಮಾಡುವುದರ ಬಗ್ಗೆ. |
| | ಕುಲಸಚಿವರು ಸಂಶೋಧನಾ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ ಸಂಶೋಧನಾರ್ಥಿಗಳು ಹಾಗೂ ತಾತ್ಕಾಲಿಕ ನೋಂದಣಿ ಪಡೆದ ಸಂಶೋಧನಾರ್ಥಿಗಳು ಭೋಜನ ಪಡೆದಿರುವ ಮೆಸ್ ವೆಚ್ಚದ ಬಗ್ಗೆ ಸವಿವರವಾಗಿ ಸಭೆಗೆ ತಿಳಿಸಿದರು. |

| | |
|---|---|
| | **ಡಾ. ಚಂದ್ರಶೇಖರ್** ಅವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಗಳಿಂದ ಮೆಸ್ ವೆಚ್ಚವನ್ನು ಆಯಾಯ ಸಮಯದಲ್ಲಿ ವಸೂಲಿ ಮಾಡಬೇಕಾದ ಮೊತ್ತವನ್ನು ಇಲ್ಲಿಯವರೆಗೆ ಯಾಕೆ ಬಿಟ್ಟಿದ್ದರು. ಹಾಗೂ ಇದಕ್ಕೆ ಯಾರೂ ಜವಾಬ್ದಾರರು ಎಂದರು.<br><br>ಕುಲಸಚಿವರು ಮಾತನಾಡಿ ತಾವು ಆ ಸಮಯದಲ್ಲಿ ಇರಲಿಲ್ಲಾ ಹಾಗೂ ಅದಕ್ಕೆ ಸಂಬಂಧಪಟ್ಟ ಆಯಾ ವಾರ್ಡನ್‌ಗಳು ಹಾಗೂ ಡೀನರುಗಳು ಜವಾಬ್ದಾರರಾಗಿರುತ್ತಾರೆ ಜೊತೆಗೆ ಹಿಂದೆ ಇದ್ದ ಕುಲಪತಿಗಳು ಆದೇಶ ಏನಾದರೂ ಮಾಡಿರಬಹುದು ಎಂದು ತಿಳಿಸಿದರು.<br><br>ಪ್ರೊ. ವಿಜಯಲಕ್ಷ್ಮಿ ಅವರು ಮಾತನಾಡಿ ವಿದ್ಯಾರ್ಥಿಗಳು ಹಣ ಪಾವತಿಸಿದ ನಂತರವೇ ಅವರಿಗೆ ಪ್ರಮಾಣ ಪತ್ರವನ್ನು ನೀಡಬೇಕು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ ಸಂಶೋಧನಾ ವಿದ್ಯಾರ್ಥಿಗಳು ಇನ್ನೂ ಪಿಎಚ್.ಡಿ ಮಾಡುತ್ತಾ ಇದ್ದಾರೆ. ಒಮ್ಮೆ ಉಚಿತವಾಗಿ ನೀಡಿದಾಗ ಅದನ್ನೇ ಪಾಲಿಸಿಕೊಂಡು ಬಂದಿರುತ್ತಾರೆ. ವಿದ್ಯಾರ್ಥಿಗಳಿಂದ ಮೆಸ್ ಶುಲ್ಕವನ್ನು ಮಾಸಿಕವಾಗಿ ವಸೂಲಿ ಮಾಡಲು ಹೋದಾಗ ವಿರೋಧ ವ್ಯಕ್ತಪಡಿಸಿ ಮುಷ್ಕರ ಮಾಡಿದರು. ಆದರೆ ನವೆಂಬರ್ 2022ರಿಂದ ಹಣ ವಸೂಲಿ ಮಾಡುತ್ತಾ ಇದ್ದೇವೆ. ಹಲವಾರು ಬಾರಿ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕುಂದುಕೊರತೆಗಳ ಬಗ್ಗೆ ಮುಷ್ಕರ ಮಾಡುತ್ತಿರುತ್ತಾರೆ. ಆ ಸಂದರ್ಭದಲ್ಲಿ ನಾನು, ಕುಲಸಚಿವ (ಪರೀಕ್ಷಾಂಗ) ಮತ್ತು ಡಿ.ಎಸ್.ಪಿ ಯವರು ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಪಟ್ಟಿದ್ದೆವು. ಹಿಂದೆ ಜವಾಬ್ದಾರಿ ಸ್ಥಾನದಲ್ಲಿ ಇದ್ದವರು ಇದಕ್ಕೆ ಅವಕಾಶ ಮಾಡಿಕೊಡಬಾರದಾಗಿತ್ತು. ಮಕ್ಕಳಿಗೆ ಉಚಿತ ಎಂದಾಗ ನಮಗೂ ಕೊಡಿ ಎಂದು ಕೇಳುತ್ತಾರೆ ಎಂದು ತಿಳಿಸಿದರು.<br><br>**ಶ್ರೀ ಗೋಕುಲ್ ಗೋವರ್ಧನ್, ಡಾ. ಚಂದ್ರಶೇಖರ್ ಮತ್ತು ಹಣಕಾಸು ಅಧಿಕಾರಿ** ಅವರುಗಳು ಮಾತನಾಡಿ ಮೆಸ್ ವೆಚ್ಚದ ಬಾಕಿ ವಸೂಲಾತಿಯನ್ನು ಸಂಬಂಧಪಟ್ಟ ಮುಖ್ಯಸ್ಥರಿಂದ ವಸೂಲಿ ಮಾಡಲು ಸಮಯವನ್ನು ನಿಗಧಿಪಡಿಸಲು ತಿಳಿಸಿದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾತಿ ಪಡೆದಿರುವ ಸಂಶೋಧನಾರ್ಥಿಗಳು ಹಾಗೂ ತಾತ್ಕಾಲಿಕ ನೋಂದಣಿ ಪಡೆದ (Provisional Registration Certificate) ಸಂಶೋಧನಾರ್ಥಿಗಳು ಭೋಜನ ಪಡೆದಿರುವ ಮೆಸ್ ವೆಚ್ಚದ ಬಾಕಿ ವಸೂಲಾತಿಯನ್ನು ಸಂಬಂಧಪಟ್ಟ ಮುಖ್ಯಸ್ಥರಿಂದ ವಸೂಲಿ ಮಾಡುವುದು ಹಾಗೂ ಹಣವನ್ನು ಪಾವತಿಸಲು ಸಮಯವನ್ನು ನಿಗದಿ ಮಾಡುವುದು ಎಂದು ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2023/5.19** | ಶ್ರೀ ನರೇಂದ್ರ ಕೆ., ಸಹಾಯಕ ಹಣಕಾಸು ಅಧಿಕಾರಿ ಮತ್ತು ಉಪಕುಲಸಚಿವ (ಸಾಮಾನ್ಯ) (ಪ್ರಭಾರ) ಇವರನ್ನು ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ ಇಲ್ಲಿಗೆ ನಿಯೋಜಿಸುವಂತೆ ಕೋರಿರುವ ಬಗ್ಗೆ. |
| | **ಶ್ರೀ ಗೋಕುಲ್ ಗೋವರ್ಧನ್** ಅವರು ಮಾತನಾಡಿ ಶ್ರೀ ನರೇಂದ್ರ ಕೆ. ಇವರನ್ನು ನಿಯೋಜನೆ ಮೇಲೆ ಬೇರೆ ಇಲಾಖೆಗೆ ಕಳುಹಿಸಿಕೊಟ್ಟರೆ ವಿಶ್ವವಿದ್ಯಾನಿಲಯದಿಂದ ತೆರವಾದ ಇವರ ಜಾಗಕ್ಕೆ ಸರ್ಕಾರದಿಂದ ಬೇರೆಯವರನ್ನು ನಿಯೋಜಿಸುವರೆ ಎಂದು ಪ್ರಶ್ನಿಸಿದರು.<br><br>**ಕುಲಸಚಿವರು** ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯವು ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಇಲ್ಲಿಗೆ recruitmentಯಾಗದೆ ಸರ್ಕಾರದಿಂದ ಯಾರು ಬರುವುದಿಲ್ಲ ಎಂದು ತಿಳಿಸಿದರು.<br><br>**ಡಾ. ಚಂದ್ರಶೇಖರ** ಅವರು ಮಾತನಾಡಿ ಇವರನ್ನು ಕಳುಹಿಸಿಕೊಟ್ಟರೆ ವಿಶ್ವವಿದ್ಯಾನಿಲಯಕ್ಕೆ ಅನಾನುಕೂಲವಾಗುತ್ತದೆಂದು ತಿಳಿಸಿದರು. |

| | |
|---|---|
| | **ಮಾನ್ಯ ಕುಲಪತಿಯವರು** ಮಾತನಾಡಿ ಸರ್ಕಾರದಿಂದ ಪತ್ರ ಬಂದಿರುವುದರಿಂದ ನಾವು ಕಳುಹಿಸಿಕೊಡಬೇಕು. ಕಳುಹಿಸಿ ಕೊಡದೆ ಇರುವುದಕ್ಕೆ ಆಗುವುದಿಲ್ಲ. ಹಿಂದೆ ಹಲವರು ಬೇರೆ ಬೇರೆ ಸರ್ಕಾರಿ ಕಛೇರಿಗಳಗೆ ನಿಯೋಜನೆಗೊಂಡಿರುತ್ತಾರೆ. ಗರಿಷ್ಠ 2 ವರ್ಷ ಅವಧಿಯವರೆಗೆ ಬೇರೆ ಕಚೇರಿಗಳಗೆ ನಿಯೋಜಿಸಬಹುದು ಎಂದು ಸಭೆಯ ಗಮನಕ್ಕೆ ತಂದರು.<br><br>**ಶ್ರೀ ಗೋಕುಲ್ ಗೋವರ್ಧನ್** ಅವರು ಮಾತನಾಡಿ ಸಿಬ್ಬಂದಿ ಸಾಕಷ್ಟು ಜನ ಇದ್ದರು. ಈಗ ಪ್ರತಿ ವರ್ಷ ಸಾಕಷ್ಟು ಸಿಬ್ಬಂದಿಗಳು ನಿವೃತ್ತಿ ಆಗುತ್ತಿದ್ದಾರೆ. ಇನ್ನು ಮುಂದೆ ಕಳುಹಿಸಿಕೊಡಲು ಸಾಧ್ಯವಿಲ್ಲವೆಂದು ಒಂದು order pass ಮಾಡಿ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಇವರನ್ನು ಕಳುಹಿಸಲು ಸಾಧ್ಯಾವಿಲ್ಲವೆಂದು ಸರ್ಕಾರಕ್ಕೆ ಪತ್ರ ಬರೆಯಿರಿ ಎಂದರು.<br><br>**ಶ್ರೀ ಸುರೇಶ್** ಅವರು ಮಾತನಾಡಿ ಈ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಲಾಯಿತು ಆದರೆ ಸಿಂಡಿಕೇಟ್ ಸಭೆಯು ಇದನ್ನು ನಿರಾಕರಿಸಿತು ಎಂದು ಸರ್ಕಾರಕ್ಕೆ ಪತ್ರವನ್ನು ಬರೆಯಿರಿ ಎಂದರು. |
| **ತೀರ್ಮಾನ** | ಸುದೀರ್ಘ ಚರ್ಚೆಯ ನಂತರ ಶ್ರೀ ನರೇಂದ್ರ ಕೆ., ಸಹಾಯಕ ಹಣಕಾಸು ಅಧಿಕಾರಿ ಮತ್ತು ಉಪಕುಲಸಚಿವ (ಸಾಮಾನ್ಯ) (ಪ್ರಭಾರ) ಇವರನ್ನು ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ ಇಲ್ಲಿಗೆ ಇವರನ್ನು ಒಂದು ವರ್ಷದ ಅವಧಿಗೆ ನಿಯೋಜಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/5.20** | Retirement of Teachers of Constituent Colleges during the Calendar Year-2024. |
| **ತೀರ್ಮಾನ** | The Syndicate approved the teachers working in the Constituent Colleges to retire on attaining the age of superannuation during the calendar year 2024 and also for re-employment on contractual basis on the above said pay, if required till the end of respective semester. |
| **ಸಾಮಾನ್ಯ ಸಭೆ 2023/5.21** | ಮೈಸೂರು ವಿಶ್ವವಿದ್ಯಾನಿಲಯವು Online ಮೂಲಕ ಶಿಕ್ಷಣ ನೀಡುವ ಸಂಬಂಧ ಒಡಂಬಡಿಕೆ ಮಾಡಿಕೊಂಡಿರುವ University 18 Trust ಅವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದಂತೆ ಸೂಕ್ತ ಮೂಲಭೂತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಕಾರ್ಯನಿರ್ವಹಿಸಲು ಹೆಚ್ಚುವರಿಯಾಗಿ 2 ಕೊಠಡಿ/ ಸಭಾಂಗಣಗಳನ್ನು ಹಂಚಿಕೆ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯವು Online ಮೂಲಕ ಶಿಕ್ಷಣ ನೀಡುವ ಸಂಬಂಧ ಒಡಂಬಡಿಕೆ ಮಾಡಿಕೊಂಡಿರುವ University 18 Trust ಅವರು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊರೆಯಿಲ್ಲದಂತೆ ಸೂಕ್ತ ಮೂಲಭೂತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಕಾರ್ಯನಿರ್ವಹಿಸಲು ಹೆಚ್ಚುವರಿಯಾಗಿ 2 ಕೊಠಡಿ/ ಸಭಾಂಗಣಗಳನ್ನು ಹಂಚಿಕೆ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2023/5.22** | Board of Studies in Interdisciplinary Studies (Employability Skills and Others-SEC) ಅಧ್ಯಯನ ಮಂಡಳಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಸ್ನಾತಕ ಪದವಿಯ ಮೂರನೇ ವರ್ಷಕ್ಕೆ Skill Enhancement Council ನಡಿ ನಿಗದಿಪಡಿಸಿರುವ Employability Skills ಕೋರ್ಸ್‌ನ ಪಠ್ಯಕ್ರಮ ಸಿದ್ಧಪಡಿಸಿರುವ ಸಂಬಂಧ Commerce, Management ಮತ್ತು Mathematics Stream ನ |

| | |
|---|---|
| | ಅಧ್ಯಾಪಕರುಗಳನ್ನು ಒಳಗೊಂಡ ಅಂತರ್ ಶಿಸ್ತೀಯ ಅಧ್ಯಯನ ಮಂಡಳ (Interdisciplinary BoS) ರಚಿಸುವಂತೆ ಕೋರಿರುವ ಹಿನ್ನೆಲೆಯಲ್ಲಿ Board of Studies in Interdisciplinary Studies (Employability Skills and Others-SEC) ಅಧ್ಯಯನ ಮಂಡಳಿಯನ್ನು ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2023/5.23 | ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಷನ್ ಲಿಮಿಟೆಡ್, ಮಂಡ್ಯರವರಿಗೆ 16 ದಿನಸಿ ಪದಾರ್ಥಗಳ ದರಗಳನ್ನು ಪರಿಷ್ಕರಿಸಿ ತಾತ್ಕಾಲಿಕವಾಗಿ ಮುಂದುವರೆಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| | ಕುಲಸಚಿವರು ಮಾತನಾಡಿ, ದಿನಸಿ ಪದಾರ್ಥಗಳನ್ನು ಸರಬರಾಜು ಮಾಡುತ್ತಿರುವ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ಸ್ ಫೆಡರೇಷನ್ ಲಿಮಿಟೆಡ್, ಮಂಡ್ಯರವರ ಟೆಂಡರ್ ಅವಧಿಯು ಪೂರ್ಣಗೊಂಡಿದ್ದು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಿದಂತೆ ಇನ್ನು ಮೂರು ತಿಂಗಳುಗಳಿಗೆ ವಿಸ್ತರಿಸಲಾಗಿದೆ. ವಿದ್ಯಾರ್ಥಿನಿಲಯಗಳ 4500 ಮಂದಿಗೆ ಆಹಾರ ತಯಾರಿಸಲು ದಿನಸಿ ಪದಾರ್ಥಗಳನ್ನು ಸರಬರಾಜು ಮಾಡಿರಲಿಲ್ಲ. ಟೆಂಡರ್‌ದಾರರು ದಿನಸಿ .ಪದಾರ್ಥಗಳು, ಹಾಲು/ಮೊಸರು ಹಾಗೂ ಆಹಾರ ಪದಾರ್ಥಗಳ ಬೆಲೆಗಳು ಹೆಚ್ಚಾಗಿರುವುದರಿಂದ ದರಗಳನ್ನು ಪರಿಷ್ಕರಿಸಬೇಕೆಂದು ಕೋರಿದ್ದ ಹಿನ್ನೆಲೆಯಲ್ಲಿ, ಅಲ್ಪಮಟ್ಟಿಗೆ ದರಗಳನ್ನು ಪರಿಷ್ಕರಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಸುರೇಶ್ ಮಾತನಾಡಿ, ಟೆಂಡರ್‌ನಲ್ಲಿ ನಮೂದಿಸುವ ಪದಾರ್ಥಗೇಗೆ ಶೇ.25 ರಷ್ಟು ಮಾತ್ರ ದರವನ್ನು ಪರಿಷ್ಕರಿಸಬಹುದು, ಅದಕ್ಕಿಂತ ಹೆಚ್ಚಿನ ಮಟ್ಟದಲ್ಲಿ ದರ ಪರಿಷ್ಕರಿಸಲು ಅವಕಾಶವಿಲ್ಲದಿರುವುದರಿಂದ, ಹೊಸದಾಗಿ ಇ-ಟೆಂಡರ್ ಕರೆಯಬೇಕಾಗುತ್ತದೆಂದರು.<br><br>ಕುಲಪತಿಗಳು ಮಾತನಾಡಿ, ಪ್ರಸ್ತುತವಿರುವ ಟೆಂಡರ್‌ದಾರರ ಅವಧಿಯು ಪೂರ್ಣಗೊಂಡಿದ್ದು, ಇ-ಟೆಂಡರ್‌ನ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳಲು ಮೂರು ತಿಂಗಳಾಗುವುದರಿಂದ, ವಿದ್ಯಾರ್ಥಿನಿಲಯಗಳ ಸಂಶೋಧನಾ/ವ್ಯಾಸಂಗ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೂರು ತಿಂಗಳು ಮಾತ್ರ ವಿಸ್ತರಿಸಲಾಗಿದೆ. ಕಾಲಾವಕಾಶ ವಿಸ್ತರಿಸುವ ಸಂದರ್ಭದಲ್ಲಿ ಟೆಂಡರ್‌ನವರು ದಿನನಿತ್ಯ ಎಲ್ಲಾ ಬೆಲೆಗಳು ಹೆಚ್ಚಾಗುತ್ತಿರುವುದರಿಂದ, ದರಗಳನ್ನು ಪರಿಷ್ಕರಿಸಿ ಆದೇಶ ನೀಡಬೇಕೆಂದು ಕೋರಿದ್ದರಿಂದ, ಅಲ್ಪಮಟ್ಟಿಗೆ ದರಗಳನ್ನು ಪರಿಷ್ಕರಿಸಲಾಗಿದೆ ಎಂದು ತಿಳಿಸಿದರು.<br><br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಟೆಂಡರ್‌ದಾರರ ಅವಧಿಯು ಜುಲೈ 2023ಕ್ಕೆ ಅಂತ್ಯಗೊಂಡಿದ್ದರಿಂದ, ಇದುವರೆವಿಗೂ ಹೊಸದಾಗಿ ಇ-ಟೆಂಡರ್ ಏಕೆ ಆಹ್ವಾನಿಸಿರುವುದಿಲ್ಲ ಎಂದು ಪ್ರಶ್ನಿಸಿದರು.<br><br>ಪ್ರತಿಕ್ರಿಯಿಸಿದ ಕುಲಪತಿಗಳು ಹೊಸದಾಗಿ ಇ-ಟೆಂಡರ್ ಆಹ್ವಾನಿಸಲು ಕಡತದಲ್ಲಿ ಕುಲಪತಿಯವರ ಅನುಮೋದನೆ ಪಡೆಯಬೇಕಾಗಿರುತ್ತದೆ. ಆಗಸ್ಟ್-ಸೆಪ್ಟಂಬರ್ ಮಾಹೆಯಲ್ಲಿ ವಿದ್ಯಾರ್ಥಿನಿಲಯಗಳ ಸಂಶೋಧನಾ/ವ್ಯಾಸಂಗ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಟೆಂಡರ್ ಕಾಲಾವಕಾಶ ವಿಸ್ತರಿಸಲಾಗಿತ್ತು. ಸದ್ಯದಲ್ಲೇ ಇ-ಟೆಂಡರ್ ಆಹ್ವಾನಿಸಲು ಕ್ರಮವಹಿಸಲಾಗುತ್ತಿದೆಂದರು. ಟೆಂಡರ್ ಕರೆದ ಅವಧಿಯಲ್ಲಿ ದಿನಸಿ/ಆಹಾರ ಪದಾರ್ಥಗಳಿಗೆ ವಿಶ್ವವಿದ್ಯಾನಿಲಯ ನಮೂದಿಸಿದ ದರಗಳು ಒಂದಾದರೆ, ಟೆಂಡರ್‌ದಾರರು ನಮೂದಿಸಿರುವ ದರಗಳು ಬೇರೆಯಾಗಿರುವುದರಿಂದ ಕೂಡಲೇ ಒಂದು ಸಮಿತಿಯನ್ನು ರಚಿಸಿ, ಸಮಿತಿಯ ವರದಿಯನ್ವಯ ಕ್ರಮವಹಿಸಲಾಗುವುದೆಂದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯವು ಸದರಿ ಟೆಂಡರ್‌ದಾರರ ಹುಂಡಿಯನ್ನು ಪಾವತಿಸದಿದ್ದಲ್ಲಿ, ವಿದ್ಯಾರ್ಥಿನಿಲಯಗಳಿಗೆ ದಿನಸಿ/ಆಹಾರ ಪದಾರ್ಥಗಳ ಸರಬರಾಜು ಮಾಡುವುದನ್ನು ಕೂಡಲೇ ನಿಲ್ಲಿಸುತ್ತಾರೆಂದು ಸಭೆಯ ಗಮನಕ್ಕೆ ತಂದರು. |

| | |
|---|---|
| | ವಿಶ್ವವಿದ್ಯಾನಿಲಯವು ಪರಿಷ್ಕರಿಸಿರುವ ದರ ಪಟ್ಟಿಯನ್ನು ಪರಿಶೀಲಿಸಿದ ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಪ್ರತಿನಿತ್ಯ ವಿದ್ಯಾರ್ಥಿನಿಲಯಗಳಲ್ಲಿರುವ 4500 ಮಂದಿಗೆ ಊಟದ ವ್ಯವಸ್ಥೆ ಮಾಡಬೇಕಾಗಿದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ಊಟ ದೊರೆಯದಿದ್ದಲ್ಲಿ ವಿಶ್ವವಿದ್ಯಾನಿಲಯದ ವಿರುದ್ಧ ಪ್ರತಿಭಟನೆ ಮಾಡುತ್ತಾರೆ. ಈ ಸಂದರ್ಭವನ್ನು ಟೆಂಡರ್‌ದಾರರು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಈ ಸಂಬಂಧ ತುರ್ತಾಗಿ ಒಂದು ಸಮಿತಿಯನ್ನು ರಚಿಸುವುದು ಸೂಕ್ತವೆಂದರು. ಹಾಗೆಯೇ ಶ್ರೀ ಮಹದೇಶ್ವರ ಟ್ರೇಡರ್ಸ್ ಅವರು ತುಲನಾತ್ಮಕ ದರಪಟ್ಟಿಯನ್ನು ನೀಡಿದ್ದು, ಇದರಲ್ಲಿ ದಿನಾಂಕವನ್ನು ನಮೂದಿಸಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ದಿನಸಿ ಪದಾರ್ಥಗಳ ದರಗಳನ್ನು ಪರಿಷ್ಕರಿಸಿ ತಾತ್ಕಾಲಿಕವಾಗಿ ಮುಂದುವರೆಸಿ ವಿಶ್ವವಿದ್ಯಾನಿಲಯವು ಕೈಗೊಂಡಿರುವ ಕ್ರಮದ ಬಗ್ಗೆ ಪರಿಶೀಲಿಸಿ ವರದಿ ನೀಡಲು ಒಂದು ಸಮಿತಿಯನ್ನು ರಚಿಸುವಂತೆ ಮತ್ತು ತಕ್ಷಣವೇ ವಿದ್ಯಾರ್ಥಿನಿಲಯಗಳಲ್ಲಿನ ಆಹಾರ ಪದಾರ್ಥಗಳ ಸರಬರಾಜಿಗೆ ಸಂಬಂಧಿಸಿದಂತೆ ನಿಯಮಗಳನುಸಾರ ಟೆಂಡರ್ ಆಹ್ವಾನಿಸಲು ಸಹ ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/5.24** | ಆಹಾರ ಪದಾರ್ಥಗಳನ್ನು (ತರಕಾರಿ, ಹಾಲು, ಮೊಸರು ಮತ್ತು ಚಿಕನ್ ಇತ್ಯಾದಿಗಳನ್ನು) ಸರಬರಾಜು ಮಾಡುತ್ತಿರುವ ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ದವರಿಗೆ 17 ಆಹಾರ ಪದಾರ್ಥಗಳ ದರಗಳನ್ನು ಪರಿಷ್ಕರಿಸಿ ತಾತ್ಕಾಲಿಕವಾಗಿ ಮುಂದುವರೆಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | ಒಂದು ಸಮಿತಿಯನ್ನು ರಚಿಸುವುದು ಹಾಗೂ ಸಮಿತಿಯ ವರದಿಯನ್ವಯ ಕ್ರಮವಹಿಸಲು ಸಿಂಡಿಕೇಟ್ ಸಭೆಯು ನಿರ್ಧರಿಸಿತು. |
| **ಸಾಮಾನ್ಯ ಸಭೆ 2023/5.25** | ಅಡುಗೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಒದಗಿಸುತ್ತಿರುವ ಮೆ: ಕಾಂತಿ ಏಜೆನ್ಸಿ ನೆಟ್‌ವರ್ಕ್ಸ್, ಮೈಸೂರು ಇವರನ್ನು ತಾತ್ಕಾಲಿಕವಾಗಿ ಮುಂದುವರೆಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | ಒಂದು ಸಮಿತಿಯನ್ನು ರಚಿಸುವುದು ಹಾಗೂ ಸಮಿತಿಯ ವರದಿಯನ್ವಯ ಕ್ರಮವಹಿಸಲು ಸಿಂಡಿಕೇಟ್ ಸಭೆಯು ನಿರ್ಧರಿಸಿತು. |
| **ಸಾಮಾನ್ಯ ಸಭೆ 2023/5.26** | ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರು ವಿ.ವಿ. ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿರುವ ನಂದಿನಿ ಹಾಲು ಹಾಗೂ ಮೊಸರುಗಳ ದರಗಳನ್ನು ರೂ. 2/-ಗಳಿಗೆ ಹೆಚ್ಚಿಸಿ ಪರಿಷ್ಕರಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರು ವಿಶ್ವವಿದ್ಯಾನಿಲಯ ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿರುವ ನಂದಿನಿ ಹಾಲು ಹಾಗೂ ಮೊಸರುಗಳ ದರಗಳನ್ನು ರೂ. 2/-ಗಳಿಗೆ ಹೆಚ್ಚಿಸಿ ಪರಿಷ್ಕರಿಸಿರುವ ಆದೇಶ ಹೊರಡಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2023/5.27** | ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿನ 2023ರ ಆಗಸ್ಟ್ ಮಾಹೆಯ ಭೋಜನ ವ್ಯವಸ್ಥೆಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ಮೆ: ವಿನಾಯಕ ಎಂಟರ್‌ಪ್ರೈಸಸ್, ಚಾಮರಾಜನಗರ ಇವರಿಂದ ಖರೀದಿಸಿರುವ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ ಕೋರಿ. |
| **ತೀರ್ಮಾನ** | ಒಂದು ಸಮಿತಿಯನ್ನು ರಚಿಸುವುದು ಹಾಗೂ ಸಮಿತಿಯ ವರದಿಯನ್ವಯ ಕ್ರಮವಹಿಸಲು ಸಿಂಡಿಕೇಟ್ ಸಭೆಯು ನಿರ್ಧರಿಸಿತು. |
| **ಸಾಮಾನ್ಯ ಸಭೆ 2023/5.28** | ಶ್ರೀಮತಿ ಎ.ಸಿ.ಲಲಿತ, ನಿವೃತ್ತ ಸಹ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ವಿಸ್ತರಿಸಿರುವ ಪದೋನ್ನತಿ ಸೌಲಭ್ಯವನ್ನು ಹಿಂಪಡೆದು ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತವನ್ನು ವಸೂಲು ಮಾಡುವ ಬಗ್ಗೆ. |

| | |
|---|---|
| | ಕುಲಸಚಿವರು ಮಾತನಾಡಿ, 2016-2017ರ ಅವಧಿಯಲ್ಲಿಯೇ ಈ ಆಕ್ಷೇಪಣೆಯನ್ನು ಮಹಾಲೇಖ ಪಾಲಕರು ವಿಶ್ವವಿದ್ಯಾನಿಲಯದ ಗಮನಕ್ಕೆ ತಂದಿರುತ್ತಾರೆ. ಶ್ರೀ ಆರ್.ಅಶೋಕ್ ಅವರ ಅಧ್ಯಕ್ಷತೆಯಲ್ಲಿ ನಡೆದ ಲೆಕ್ಕಪತ್ರಗಳ ಸಮಿತಿಯಲ್ಲಿಯೂ ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತವನ್ನು ವಸೂಲಾತಿ ಮಾಡಬೇಕೆಂದು, ಇಲ್ಲವಾದರೆ ಮುಂದಿನ ಲೆಕ್ಕಪತ್ರಗಳ ಸಮಿತಿ ಸಭೆಯಲ್ಲಿ ಕುಲಪತಿ, ಕುಲಸಚಿವ ಹಾಗೂ ಹಣಕಾಸು ಅಧಿಕಾರಿ ವಿರುದ್ಧ ಕಠಿಣ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಶಿಫಾರಸ್ಸು ಮಾಡಿರುತ್ತದೆಂದರು.<br><br>ಕುಲಪತಿಗಳು ಮಾತನಾಡಿ, ಈ ಬಗ್ಗೆ ಸಿಎಜಿ ಆಡಿಟ್‌ನವರು ಆಕ್ಷೇಪಣಾ ವರದಿಯನ್ನು ಸಲ್ಲಿಸಿರುತ್ತಾರೆ. ಈ ಆಕ್ಷೇಪಣಾ ಕಂಡಿಕೆಯು ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯಲ್ಲಿ ಗಂಭೀರವಾಗಿ ಪರಿಗಣಿಸಿರುತ್ತಾರೆಂದು ತಿಳಿಸಿರುತ್ತಾರೆ. |
| **ತೀರ್ಮಾನ** | 2016-17ರಲ್ಲಿ ಮಹಾಲೇಖಪಾಲಕರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಆಕ್ಷೇಪಣಾ ಕಂಡಿಕೆ ಹಾಗೂ ಕರ್ನಾಟಕ ವಿಧಾನಮಂಡಲದ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ನಿರ್ದೇಶಾನುಸಾರ ಶ್ರೀಮತಿ ಎ.ಸಿ. ಲಲಿತ, ನಿವೃತ್ತ ಸಹ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಿಎಎಸ್ ಅಡಿಯಲ್ಲಿ ವಿಸ್ತರಿಸಿರುವ ಪದೋನ್ನತಿ ಸೌಲಭ್ಯವನ್ನು ಹಿಂಪಡೆದು ಹೆಚ್ಚುವರಿಯಾಗಿ ಪಾವತಿಯಾಗಿರುವ ಮೊತ್ತವನ್ನು ವಸೂಲಾತಿ ಮಾಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2023/5.29** | ಡಾ. ವಿಶ್ವನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ನವದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ಇವರ ಹುದ್ದೆಯ ಮೇಲಿನ ಹಕ್ಕನ್ನು ಮತ್ತೊಂದು ವರ್ಷಕ್ಕೆ ಕಾಯ್ದಿರಿಸಲು ಸಲ್ಲಿಸಿದ್ದ ಮನವಿಯ ಬಗ್ಗೆ. |
| | ಡಾ. ವಿಶ್ವನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು 02 ವರ್ಷ ತಮ್ಮ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸಿ ದಿನಾಂಕ:01-10-2020 ರಿಂದ 30-09-2022 ರವರೆಗೆ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಲು ವಿಶ್ವವಿದ್ಯಾನಿಲಯವು ಆದೇಶ ನೀಡಬೇಕೆಂದು ಸಲ್ಲಿಸಿದ ಮನವಿ ಮೇರೆಗೆ, ವಿಶ್ವವಿದ್ಯಾನಿಲಯವು ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಆದೇಶ ನೀಡಿರುತ್ತದೆ. ಮುಂದುವರೆದು, ಡಾ. ವಿಶ್ವನಾಥ ಅವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ನವದೆಹಲಿಯು ದಿನಾಂಕ: 01-10-2022 ರಿಂದ 30-09-2023 ರವರೆಗೆ ಪ್ರಾಧ್ಯಾಪಕರಾಗಿ ಕನ್ನಡ ವಿಭಾಗದಲ್ಲಿ ಮುಂದುವರೆಯಲು ಆದೇಶ ನೀಡಿರುವುದರಿಂದ, ಮೈಸೂರು ವಿಶ್ವವಿದ್ಯಾನಿಲಯ ದಲ್ಲಿನ ತಮ್ಮ ಹುದ್ದೆಯ ಮೇಲಿನ ಹಕ್ಕನ್ನು ಮತ್ತೊಂದು ವರ್ಷಕ್ಕೆ ಮುಂದುವರೆಸಬೇಕೆಂದು ಮನವಿ ಮಾಡಿರುತ್ತಾರೆ.<br><br>ಕುಲಸಚಿವರು ಮಾತನಾಡಿ, ಡಾ. ವಿಶ್ವನಾಥ ಅವರು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ನವದೆಹಲಿ ಇಲ್ಲಿನ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆಯ ಅವಧಿಯು ದಿನಾಂಕ: 30-09-2023ಕ್ಕೆ ಪೂರ್ಣಗೊಂಡಿರುತ್ತದೆ. ತದನಂತರ ಇವರು ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕಾಗಿತ್ತು. |

| | |
|---|---|
| | ಹಣಕಾಸು ಅಧಿಕಾರಿ ಮಾತನಾಡಿ, ದಿನಾಂಕ: 30-09-2023ರ ನಂತರ ಡಾ. ವಿಶ್ವನಾಥ ಅವರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದಿರುವುದರಿಂದ, ಇವರೆಗಿನ ಅವರ ರಜೆ ಮತ್ತು ವೇತನವನ್ನು ಯಾವ ರೀತಿ ಪರಿಗಣಿಸುವುದೆಂದರು.<br><br>ಈ ಸಂಬಂಧ ಕುಲಪತಿಗಳು ಮಾತನಾಡಿ, ಕೆ.ಸಿ.ಎಸ್.ಆರ್. ನಿಯಮಾನುಸಾರ ಕ್ರಮ ವಹಿಸಬೇಕೆಂದರು.<br><br>ಡಾ. ವಿಶ್ವನಾಥರವರು ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಮತ್ತೊಮ್ಮೆ ಒಂದು ವರ್ಷದ ಅವಧಿಗೆ ದಿನಾಂಕ: 01-10-2022 ರಿಂದ 30-09-2023 ರವರೆಗೆ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಲ್ಲದೇ ದಿನಾಂಕ: 30-09-2023ರ ನಂತರದಿಂದ ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ಮನವಿಯನ್ನು ಸಲ್ಲಿಸಿರುವುದಿಲ್ಲ. ಈ ಅಂಶಗಳನ್ನು ಸಿಂಡಿಕೇಟ್ ಸಭೆಯು ಗಮನಿಸಿತು. |
| **ತೀರ್ಮಾನ** | ಡಾ. ವಿಶ್ವನಾಥ, ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಕೂಡಲೇ ಮಾತೃ ವಿಭಾಗದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ವಿಶ್ವವಿದ್ಯಾನಿಲಯದಿಂದ ಪತ್ರ ಬರೆಯುವುದು ಹಾಗೂ ಎರಡು ವರ್ಷದ ಲೀನ್ ಅವಧಿ ಮುಗಿದ ನಂತರ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆಯದೇ ಮತ್ತೆ ಒಂದು ವರ್ಷದ ಅವಧಿಗೆ ದಿನಾಂಕ: 01-10-2022 ರಿಂದ 30-09-2023 ರವರೆಗೆ ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿ ಇಲ್ಲಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ: 30-09-2023ರ ನಂತರದಿಂದ ಇದುವರೆವಿಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ಮನವಿಯನ್ನು ಸಲ್ಲಿಸದಿರುವ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿ ತೀರ್ಮಾನ ಕೈಗೊಳ್ಳಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2023/5.30** | ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ನೇಮಕ ಮಾಡುವ ಬಗ್ಗೆ. |
| | ಕುಲಪತಿಗಳು ಮಾತನಾಡಿ, 2016-17ನೇ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾನಿಲಯದಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟ ಐದು ಅಧ್ಯಯನ ವಿಭಾಗಗಳಿಗೆ 11 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳನ್ನು ರೂ.50,000/-ಗಳ ಕ್ರೋಢಿಕೃತ ವೇತನದ ಆಧಾರದ ಮೇಲೆ ನೇಮಕಾತಿ ಮಾಡಲಾಗಿದೆ. 11 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ಪೈಕಿ 05 ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರು ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಿಂದ ತಡೆಯಾಜ್ಞೆ ತಂದು 02 ವರ್ಷಗಳ ಅವಧಿಗೆ ಕರ್ತವ್ಯದಲ್ಲಿ ಮುಂದುವರೆದು, ಇವರುಗಳ ನೇಮಕಾತಿ ಅವಧಿಯು ಈಗಾಗಲೇ ಮುಕ್ತಾಯಗೊಂಡಿರುತ್ತದೆ. ಪ್ರಸ್ತುತ 06 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳು ಮತ್ತೆ 05 ವರ್ಷಗಳ ಅವಧಿಗೆ ಸೇವೆಯನ್ನು ಮುಂದುವರೆಸಬೇಕೆಂದು ಹಾಗೂ ವೇತನವನ್ನು ಹೆಚ್ಚಿಸುವಂತೆ ಕೋರಿದ್ದು, ಸಂಬಂಧಪಟ್ಟ ಅಧ್ಯಯನ ವಿಭಾಗದ ಅಧ್ಯಕ್ಷರುಗಳು ಇವರುಗಳ ಸೇವೆಯನ್ನು ಮುಂದುವರೆಸಲು ಶಿಫಾರಸ್ಸನ್ನು ಮಾಡಿರುತ್ತಾರೆ.<br><br>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ವೇತನವನ್ನು ನಿಗದಿಪಡಿಸಲಾಗಿರುತ್ತದೆ. ಇದರಲ್ಲಿ ಪೂರ್ಣಕಾಲಿಕ ಅತಿಥಿ ಉಪನ್ಯಾಸಕರಲ್ಲಿ ಕೆಲವರು ನಮಗೂ ರೂ.50,000/-ಗಳನ್ನು ನಿಗದಿಪಡಿಸುವಂತೆ ಕೋರಿರುತ್ತಾರೆ ಹಾಗೂ 06 |

| | |
|---|---|
| | ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ವೇತನವನ್ನು ಸ್ವಯಂ ಆರ್ಥಿಕತೆಯನ್ನು ಕ್ರೋಢೀಕೃತಗೊಳಿಸಿದ ಅನುದಾನದಲ್ಲಿ ಭರಿಸಲಾಗುವುದೆಂದು ಆದೇಶ ನೀಡಲಾಗಿದೆ. ಆದರೆ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಅನುದಾನವಿಲ್ಲದ ಕಾರಣ ವಿಶ್ವವಿದ್ಯಾನಿಲಯದಿಂದಲೇ ವೇತನವನ್ನು ಪಾವತಿಸಲಾಗುತ್ತಿದೆ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಪ್ರಾಧ್ಯಾಪಕರುಗಳು/ಅತಿಥಿ ಉಪನ್ಯಾಸಕರುಗಳಿಗೆ ಏಕ ರೀತಿಯ ವೇತನ ಹಾಗೂ ನಿಯಮಗಳನ್ನು ರೂಪಿಸಲು ಒಂದು ಸಮಿತಿಯನ್ನು ರಚಿಸಲಾಗುವುದೆಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, 06 ಮಂದಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರುಗಳ ವೇತನವನ್ನು ಸ್ವಯಂ ಆರ್ಥಿಕತೆಯನ್ನು ಕ್ರೋಢೀಕೃತಗೊಳಿಸಿದ ಅನುದಾನದಲ್ಲಿ ಪಡೆಯಬೇಕೆಂದು ಆದೇಶ ಹೊರಡಿಸಿದ್ದು, ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದಿಂದಲೇ ವೇತನ ಪಾವತಿಸಲಾಗುತ್ತಿದೆ ಎಂದು ತಿಳಿಸಿದರು. |
| **ತೀರ್ಮಾನ** | ಒಂದು ಸಮಿತಿಯನ್ನು ರಚಿಸುವುದು ಹಾಗೂ ಸಮಿತಿಯ ವರದಿಯನ್ವಯ ಕ್ರಮ ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2023/5.31** | ಡಾ. ಎಸ್. ಲೋಕೇಶ್, ನಿವೃತ್ತ ಸಹ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಪಿಂಚಣಿ ಸೌಲಭ್ಯಗಳ ಬಗ್ಗೆ. |
| **ತೀರ್ಮಾನ** | ಡಾ. ಎಸ್. ಲೋಕೇಶ್, ನಿವೃತ್ತ ಸಹ ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಪಿಂಚಣಿ ಸೌಲಭ್ಯಗಳನ್ನು ಪಾವತಿಸುವ ಸಂಬಂಧ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಆದೇಶ ನೀಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |
| **ಸಾಮಾನ್ಯ ಸಭೆ 2023/5.32** | ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಕಾಲೇಜುಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಎರಡೂ ಕಡೆಯಲ್ಲಿ ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ. |
| | ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವ ಕಾಲೇಜುಗಳು ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಈ ಎರಡೂ ಕಡೆಯಲ್ಲಿ ಅತಿಥಿ ಉಪನ್ಯಾಸಕರು ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿರುವುದು ಕಂಡು ಬಂದಿರುತ್ತದೆ. ವರದಿಯ ಪ್ರಕಾರ ಶೇ.೮೦ ರಷ್ಟು ಅತಿಥಿ ಉಪನ್ಯಾಸಕರು ಎರಡೂ ಕಡೆ ಪೂರ್ಣ ಪ್ರಮಾಣದ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆಂದು ತಿಳಿದು ಬಂದಿದೆ. ಇತ್ತೀಚಿನ ದಿನದಲ್ಲಿ ವಿಶ್ವವಿದ್ಯಾನಿಲಯವು ಮಾಧ್ಯಮ ಗೋಷ್ಠಿಯಲ್ಲಿ ಇಂತಹವರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಿದ್ದು, ಕ್ರಮ ಕೈಗೊಂಡಿರುವ ಮಾಹಿತಿ ನೀಡುವುದು. ಈ ರೀತಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಒಂದೇ ದಿನ ಒಂದೇ ಅವಧಿಯಲ್ಲಿ ಎರಡೂ ಕಡೆ ಬೋಧನಾ ತರಗತಿಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇಂತಹವರು ಪ್ರಾಂಶುಪಾಲರೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹಾಜರಾತಿ ಪುಸ್ತಕದಲ್ಲಿ ಸಹಿ ಹಾಕುತ್ತಾರೆ. ಆ ಸಂದರ್ಭದಲ್ಲಿ ವಿದ್ಯಾರ್ಥಿಗಳು ಪ್ರಶ್ನೆ ಮಾಡುವುದಕ್ಕೆ ಸಾಧ್ಯವಿರುವುದಿಲ್ಲ. ವಾಸ್ತವವಾಗಿ ವೇಳಾಪಟ್ಟಿಯಲ್ಲಿ ಹಂಚಿಕೆ ಮಾಡಿರುವ ತರಗತಿಗಳನ್ನು ತೆಗೆದುಕೊಳ್ಳದಿರುವುದರಿಂದ ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವಾಗಿದೆ. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ನಿಗದಿಗೊಳಿಸಿರುವ ಸಂಖ್ಯೆಗನುಗುಣವಾಗಿ ಪ್ರವೇಶಾತಿ ಪ್ರಮಾಣವು ಕುಂಠಿತವಾಗಿದೆ ಹಾಗೂ ಇಂತಹವರಿಂದ ಸೂಕ್ತ ವಿದ್ಯಾರ್ಹತೆ ಹೊಂದಿರುವ ಎಷ್ಟೋ ನಿರುದ್ಯೋಗಿ ಅಭ್ಯರ್ಥಿಗಳಿಗೆ ಕೆಲಸವಿಲ್ಲದ ಪರಿಸ್ಥಿತಿಯಲ್ಲಿ ಇನ್ನೊಂದು ಕಡೆ ಉದ್ಯೋಗ ವಯೋಮಿತಿ ಮೀರುತ್ತದೆ. ಇನ್ನೊಂದು ಕಡೆ ಕುಟುಂಬ ನಿರ್ವಹಣೆ ಕಷ್ಟವಾಗುತ್ತದೆ. ಇದರಿಂದ ಹಲವಾರು ಉದ್ಯೋಗಕಾಂಕ್ಷಿಗಳಿಗೂ ಹಾಗೂ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಮೈಸೂರು ವಿಶ್ವವಿದ್ಯಾನಿಲಯವು ಹೆಚ್ಚಿನ ಮಟ್ಟದಲ್ಲಿ ಅತಿಥಿ ಉಪನ್ಯಾಸಕರುಗಳ ಮೇಲೆ ಅವಲಂಭಿತವಾಗಿದ್ದು, ಇಂತಹ ಸಮಸ್ಯೆಗಳಿಗೆ ಮೈಸೂರು ವಿಶ್ವವಿದ್ಯಾನಿಲಯವು ಒಂದು |

| | |
|---|---|
| | ಶಾಶ್ವತವಾದ ನಿರ್ಣಯ ತೆಗೆದುಕೊಳ್ಳಬೇಕು. ಅರ್ಹತೆಯಿರುವ ಅಭ್ಯರ್ಥಿಗಳಿಗೆ 04 ಮತ್ತು 06 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡುವ ಬದಲು ಒಬ್ಬರಿಗೆ 12 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಪೂರ್ಣಾವಧಿ ಅತಿಥಿ ಉಪನ್ಯಾಸಕರೆಂದು ನೇಮಕ ಮಾಡಬಹುದು. ಎರಡೂ ಕಾಲೇಜುನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ನೋಟಿಸ್ ಜಾರಿಗೊಳಿಸಬೇಕು. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಕೆಲವು ನಿಯಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕು. ಮಹಾರಾಜ ಕಾಲೇಜಿನ ಕೆಲವು ಅತಿಥಿ ಉಪನ್ಯಾಸಕರುಗಳು ಕೋರ್ಟ್ ಮೊರೆಹೋಗಿದ್ದು, ಕೋರ್ಟ್ ರಜಾ ಅವಧಿಯಲ್ಲಿ ಇವರುಗಳನ್ನು ಬಿಡುಗಡೆ ಮಾಡಬೇಕೆಂದು ತಿಳಿಸಿದ್ದರೂ, ರಜಾ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ವೇತನ ಪಾವತಿಸಿರುವುದು ಕಂಡುಬಂದಿದೆ. ಈ ಸಂಬಂಧ ಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತೇನೆ. ಹಾಗೆಯೇ ಹಿಂದಿನ ಶೈಕ್ಷಣಿಕ ಸಾಲಿನಲ್ಲಿ 12 ಗಂಟೆಗಳ ಕಾರ್ಯಭಾರ ಆದೇಶ ನೀಡಿರುವ ಕೆಲವು ಅತಿಥಿ ಉಪನ್ಯಾಸಕರಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 04 ಮತ್ತು 12 ಗಂಟೆಗಳ ಕಾರ್ಯಭಾರ ಆದೇಶ ನೀಡಿರುತ್ತೀರಿ. ಪ್ರೊ. ತಿಮ್ಮರಾಯಪ್ಪ, ಅಧ್ಯಕ್ಷರು, ಬೋಧನಾ ಕಾರ್ಯಭಾರ ಹಂಚಿಕೆ ಸಮಿತಿಯ ವರದಿಯನ್ನು ಅನುಸರಿಸಲಾಗಿರುವ ಬಗ್ಗೆ ಸ್ಪಷ್ಟನೆ ನೀಡುವುದು. ಸ್ನಾತಕೋತ್ತರ ತರಗತಿಗಳು ಪ್ರಾರಂಭವಾಗಿದ್ದರೂ ಇನ್ನು ಅನೇಕ ಅತಿಥಿ ಉಪನ್ಯಾಸಕರುಗಳಿಗೆ ವಿಶ್ವವಿದ್ಯಾನಿಲಯವು ಆದೇಶ ನೀಡಿರುವುದಿಲ್ಲವೆಂದು ಪ್ರಸ್ತಾಪಿಸಿದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು ಮಾತನಾಡಿ, ಈ ರೀತಿ ದೂರುಗಳು ಗಮನಕ್ಕೆ ಬಂದಿದ್ದು, ವಿಶ್ವವಿದ್ಯಾನಿಲಯದಿಂದ ಆದೇಶ ನೀಡುವ ಸಂದರ್ಭದಲ್ಲಿ ಪರಿಶೀಲಿಸಿದ ನಂತರವೇ ಆದೇಶ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈಗಾಗಲೇ ಸ್ನಾತಕ (ಯುಜಿ) ಮತ್ತು ಸ್ನಾತಕೋತ್ತರ (ಪಿಜಿ) ಪ್ರತಿ ಕೋರ್ಸ್‌ಗಳ ಕಾರ್ಯಭಾರ ಪರಿಶೀಲನಾ ಸಮಿತಿಯನ್ನು ರಚಿಸಿದ್ದು, ವರದಿಯನ್ನು ಪರಿಶೀಲಿಸಲಾಗಿದೆ. ಈಗ ತಾವು ತಿಳಿಸಿರುವಂತೆ ವೇಳಾಪಟ್ಟಿಯನುಸಾರ ತರಗತಿಗಳು ನಡೆಯುತ್ತಿದೆಯೋ ಇಲ್ಲವೋ ಎಂದು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗುವುದು ಮತ್ತು ಮಾನಸಗಂಗೋತ್ರಿಯಲ್ಲಿ ಅತಿಥಿ ಉಪನ್ಯಾಸಕರುಗಳು 12.00 ಗಂಟೆಗೆ ವಿಶ್ವವಿದ್ಯಾನಿಲಯವು ಹಂಚಿಕೆ ಮಾಡಿರುವ ಬೋಧನಾ ಕಾರ್ಯವನ್ನು ಪೂರ್ಣಗೊಳಿಸುತ್ತೇವೆ. ಆದರೆ ಸಂಜೆ 5.00 ಗಂಟೆತನಕ ಏಕೆ ವಿಭಾಗದಲ್ಲಿ ಉಪಸ್ಥಿತರಿರಬೇಕೆಂದು ಪ್ರಶ್ನಿಸುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ 04, 08 ಹಾಗೂ 12 ಗಂಟೆಗಳಂತೆ ಮೂರು ವಿಧದಲ್ಲಿ ನೇಮಕ ಮಾಡಲಾಗುತ್ತಿದೆ. ಇದರಲ್ಲಿ 12 ಗಂಟೆಗಳನ್ನು ಪೂರ್ಣಾವಧಿಯೆಂದು ಪರಿಗಣಿಸುತ್ತೇವೆ. 04 ಮತ್ತು 08 ಗಂಟೆಗಳನ್ನು ಹಂಚಿಕೆ ಮಾಡುವ ಅತಿಥಿ ಉಪನ್ಯಾಸಕರುಗಳ ವೇತನವು ಕಡಿಮೆಯಿರುವುದರಿಂದ, ಬೇರೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸಲು ಅವಕಾಶವಿದೆ. 04 ಮತ್ತು 08 ಗಂಟೆಗಳ ಬದಲು ಒಬ್ಬರಿಗೆ 12 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ನೇಮಕ ಮಾಡುವುದರಿಂದ, ಸುಮಾರು ಅತಿಥಿ ಉಪನ್ಯಾಸಕರುಗಳನ್ನು ಬಿಡುಗಡೆ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮೇಲೆ ಆರೋಪ ಮಾಡುವ ಜೊತೆಗೆ ಮತ್ತೆ ಅತಿಥಿ ಉಪನ್ಯಾಸಕರಾಗಿ ನೇಮಕ ಮಾಡಲೇಬೇಕೆಂದು ರಾಜಕಾರಣಿ/ಪ್ರಬಲರು/ಸಿಂಡಿಕೇಟ್ ಸದಸ್ಯರುಗಳಿಂದಲೂ ಒತ್ತಡ/ಶಿಫಾರಸ್ಸು ಮಾಡುತ್ತಾರೆ. ಸದ್ಯದಲ್ಲೇ ಸರ್ಕಾರವು ಖಾಯಂ ಅಧ್ಯಾಪಕರುಗಳನ್ನು ನೇಮಕಾತಿ ಮಾಡಲು ಕ್ರಮವಹಿಸುತ್ತೇವೆಂದು ತಿಳಿಸಿದೆ. ಆಗ ಇಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಗುವುದು. ಸದ್ಯದ ಪರಿಸ್ಥಿತಿಯಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 04, 08 ಮತ್ತು 12 ಗಂಟೆಗಳಂತೆ ನೇಮಕ ಮಾಡಿರುವ ಅತಿಥಿ ಉಪನ್ಯಾಸಕರುಗಳನ್ನು ಮುಂದುವರೆಸೋಣ. ಕಾಲೇಜು ಶಿಕ್ಷಣದಿಂದ ಅತಿಥಿ ಉಪನ್ಯಾಸಕರುಗಳ ಪಟ್ಟಿಯನ್ನು ಪಡೆದು ಎರಡೂ ಕಾಲೇಜುನಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ. ಉಪನ್ಯಾಸಕರುಗಳಿಗೆ ಪೂರ್ಣಾವಧಿ ಅಲ್ಲದಿದ್ದರೂ ಕನಿಷ್ಠ 5-6 ಗಂಟೆಗಳವರೆಗೆ ವಿಭಾಗದಲ್ಲಿ ಉಪಸ್ಥಿತರಿದ್ದು, ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಕೋರುವ ವಿದ್ಯಾರ್ಥಿಗಳಿಗೆ ಸಹಮತ |

| | |
|---|---|
| | ವ್ಯಕ್ತಪಡಿಸಬೇಕೆಂದರು. ಅತಿಥಿ ಉಪನ್ಯಾಸಕರುಗಳಿಗೆ ಶೈಕ್ಷಣಿಕ ವರ್ಷದ 10 ತಿಂಗಳುಗಳು ಮಾತ್ರ ವಿಶ್ವವಿದ್ಯಾನಿಲಯವು ವೇತನ ಪಾವತಿಸಬೇಕೆ ಹೊರತು ರಜಾ ಅವಧಿಯಲ್ಲಿ ಯಾವುದೇ ಕಾರಣಕ್ಕೂ ವೇತನ ಪಾವತಿಸಬಾರದು. ಮಾನ್ಯ ಸದಸ್ಯರು ನೀಡುವ ಪಟ್ಟಿಯನ್ನು ಪರಿಶೀಲಿಸಿ, ಇಂತಹ ಪ್ರಕರಣಗಳು ಇದ್ದಲ್ಲಿ, ಅವರುಗಳ ವೇತನದಲ್ಲಿ ಕಟಾವು ಮಾಡಬೇಕೆಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು. ಪ್ರೊ. ತಿಮ್ಮರಾಯಪ್ಪ ಅಧ್ಯಕ್ಷತೆಯ ವರದಿಯು ಹಿಂದಿನ ದಿನ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪ್ರಮಾಣವು ಕಡಿಯೆಯಾಗಿದ್ದು, ಇದರಿಂದ ಕೆಲವು ಕೋರ್ಸ್‌ಗಳಲ್ಲಿ ಬೋಧನಾ ಕಾರ್ಯಭಾರದ ಅವಧಿಯು ವ್ಯತ್ಯಾಸವಾಗಿರುತ್ತದೆ. ಆಗ ಒಂದೆರೆಡು ಪ್ರಕರಣಗಳು ಈ ರೀತಿ ಆಗಿದ್ದು, ಅವುಗಳನ್ನು ಸದ್ಯದಲ್ಲಿಯೇ ಪರಿಹರಿಸಲಾಗುವುದು. ಪ್ರತಿ ವರ್ಷವೂ ಬೋಧನಾ ಕಾರ್ಯಭಾರದ ವಿವರ ಪಡೆಯಲು ವಿಶ್ವವಿದ್ಯಾನಿಲಯವು ಎಲ್ಲಾ ವಿಭಾಗ/ಕಾಲೇಜುಗಳಿಗೆ ಈಗಾಗಲೇ ಸಿದ್ಧಪಡಿಸಲಾಗಿರುವ ನಮೂನೆಯಲ್ಲಿ ವಿವರ ಪಡೆಯಲಾಗುತ್ತಿದೆ.<br><br>ಕುಲಸಚಿವರು ಮಾತನಾಡಿ, ನಂಜನಗೂಡು ಒಂದು ಕಾಲೇಜಿನ ಪ್ರಾಂಶುಪಾಲರು ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ ಕಡ್ಡಾಯವಾಗಿ ಕಾಲೇಜಿನಲ್ಲಿರಬೇಕೆಂದು ನಿಯಮ ತಂದಿರುತ್ತದೆ. ಆದರೆ, ಅತಿಥಿ ಉಪನ್ಯಾಸಕರುಗಳು ನಮ್ಮನ್ನು ಅತಿಥಿ ಎಂದು ಪರಿಗಣಿಸುವಾಗ ಪೂರ್ಣಕಾಲಿಕವಾಗಿ ಕಾರ್ಯನಿರ್ವಹಿಸುವುದಿಲ್ಲವೆಂದು ತಿಳಿಸಿ, ಪ್ರತಿಭಟನೆ ಮಾಡಿರುತ್ತಾರೆ. ತಕ್ಷಣಕ್ಕೆ ಕಾಲೇಜಿಗೆ ಭೇಟಿ ನೀಡಿ ಸಂಜೆ 4.00 ಗಂಟೆಯವರೆಗೆ ಉಪಸ್ಥಿತರಿರಬೇಕೆಂದು ತಿಳಿಸಲಾಗಿದೆ.<br><br>ಶ್ರೀ ಸುರೇಶ್ ಮಾತನಾಡಿ, ಮಾನ್ಯತೆ ಪಡೆದಿರುವ ಹೆಚ್ಚಿನ ಪದವಿ ಕಾಲೇಜುಗಳು ಅತಿಥಿ ಉಪನ್ಯಾಸಕರುಗಳ ನೇಮಕಾತಿಯಿಂದಲೇ ಪ್ರತ್ಯೇಕವಾಗಿರುವುದು ಕಂಡು ಬಂದಿದೆ. ಅತಿಥಿ ಉಪನ್ಯಾಸಕರು ಹಾಗೂ ಅರೆಕಾಲಿಕ ಉಪನ್ಯಾಸಕರುಗಳಿಗೆ ವ್ಯತ್ಯಾಸವಿದೆ. ತಾಂತ್ರಿಕ ಶಿಕ್ಷಣವು ಅರೆಕಾಲಿಕ ಉಪನ್ಯಾಸಕರುಗಳಿಗೆ ಆದ್ಯತೆ ನೀಡಿ 09 ಗಂಟೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಮಾಹೆಯಾನ ರೂ.15,000/-ಗಳನ್ನು ನಿಗದಿಪಡಿಸಿದೆ. ಇದ್ದರಿಂದ ಅರೆಕಾಲಿಕ ಉಪನ್ಯಾಸಕರುಗಳು ಬೇರೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಬಹುದು. ಕಾಲೇಜು ಶಿಕ್ಷಣವು ಅತಿಥಿ ಉಪನ್ಯಾಸಕರುಗಳಿಗೆ ಆದ್ಯತೆ ನೀಡಿ 12 ಗಂಟೆಗಳ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿ ಮಾಹೆಯಾನ ರೂ.40,000/-ಗಳನ್ನು ನಿಗದಿಪಡಿಸಿದೆ. ಕಾಲೇಜು ಶಿಕ್ಷಣದಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳಿಗಿಂತ ತಾಂತ್ರಿಕ ಶಿಕ್ಷಣದಲ್ಲಿ ಮಾನ್ಯತೆ ಪಡೆದಿರುವ ಕೋರ್ಸುಗಳು ಕಡಿಮೆಯಿದೆ. ಆದ್ದರಿಂದ ಅತಿಥಿ ಉಪನ್ಯಾಸಕರುಗಳು ಒಂದು ಕಡೆ ಮಾತ್ರ ಕಾರ್ಯನಿರ್ವಹಿಸಬೇಕೆಂದು ಷರತ್ತಿನೊಂದಿಗೆ ಆದೇಶ ನೀಡುವುದರಿಂದ, ಹಲವರಿಗೆ ಉಪನ್ಯಾಸಕರುಗಳಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಡಬಹುದು ಎಂದು ಸಲಹೆ ನೀಡಿದರು.<br><br>ಕುಲಸಚಿವರು ಹಾಗೂ ಜಂಟಿ ನಿರ್ದೇಶಕರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ Ph.D/NET/SLET ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾಹೆಯಾನ ರೂ.32,000/-ಗಳನ್ನು ನಿಗದಿಪಡಿಸಿದೆ ಹಾಗೂ Ph.D/NET/SLET ಅರ್ಹತೆ ಹೊಂದಿಲ್ಲದೆ ಸ್ನಾತಕೋತ್ತರ ಪದವಿ ಮಾತ್ರ ಪಡೆದಿರುವ ಅಭ್ಯರ್ಥಿಗಳಿಗೆ ರೂ.30,000/-ಗಳನ್ನು ನಿಗದಿಪಡಿಸಲಾಗಿದೆಯೆಂದು ಸಭೆಯಲ್ಲಿ ಸ್ಪಷ್ಟತೆ ನೀಡಿದರು.<br><br>ಜಂಟಿ ನಿರ್ದೇಶಕರು ಮಾತನಾಡಿ, ಕಾಲೇಜು ಶಿಕ್ಷಣವು ಮೈಸೂರು ವಿಶ್ವವಿದ್ಯಾನಿಲಯದ ಅಧೀನ/ಸಂಯೋಜನೆಗೊಳಪಟ್ಟ ಎಲ್ಲಾ ಕಾಲೇಜುಗಳ ಅತಿಥಿ ಉಪನ್ಯಾಸಕರುಗಳ ಪಟ್ಟಿಯನ್ನು ಸಿದ್ಧಪಡಿಸಿದೆ. ಆದರೆ ರೂ.32,000/-ಗಳನ್ನು ನಿಗದಿಪಡಿಸಿರುವ ಅತಿಥಿ ಉಪನ್ಯಾಸಕರುಗಳಿಗೆ ಬೇರೆ ಸಂಸ್ಥೆ/ಕಾಲೇಜಿನಲ್ಲಿ ಕಾರ್ಯನಿರ್ವಹಿಸಬಾರದೆಂದು ಷರತ್ತು ವಿಧಿಸಿರುವುದಿಲ್ಲ. ಆ ಕಾರಣಗಳಿಂದಾಗಿ ಗೊಂದಲಗಳು ಉದ್ಭವಿಸುತ್ತಿದೆ ಮತ್ತು ಇದರಿಂದ ಮೊನ್ನೆ ನಡೆದ ನಂಜನಗೂಡು ಕಾಲೇಜಿನ ಪ್ರತಿಭಟನೆಯೂ ಸಹ ಕಾರಣವಾಗಿದೆ. |

| | |
|---|---|
| | ತರಗತಿಗಳು ನಡೆದ ನಂತರವೂ ಪಠ್ಯಕ್ರಮದ ಬಗ್ಗೆ ಕೆಲವು ವಿದ್ಯಾರ್ಥಿಗಳು ಮಾರ್ಗದರ್ಶನ ಕೋರುವ ಹಿನ್ನೆಲೆಯಲ್ಲಿ 12 ಗಂಟೆಗಳ ಆದೇಶ ನೀಡಿರುವ ಅತಿಥಿ ಉಪನ್ಯಾಸಕರುಗಳು ಪೂರ್ಣಾವಧಿ ಇರುವುದು ಸೂಕ್ತವೆಂದರು.<br><br>ಹಣಕಾಸು ಅಧಿಕಾರಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ 853 ಅತಿಥಿ ಉಪನ್ಯಾಸಕರುಗಳು ಕಾರ್ಯನಿರ್ವಹಿಸುತ್ತಿದ್ದು, ಆಯಾ ಕಾಲೇಜು/ಸಂಸ್ಥೆ/ಕೇಂದ್ರ/ಅಧ್ಯಯನ ವಿಭಾಗದವರು ಅತಿಥಿ ಉಪನ್ಯಾಸಕರುಗಳ ವೇತನ ಹುಂಡಿಯನ್ನು ಹಣಕಾಸು ಅಧಿಕಾರಿಗಳಿಗೆ ಸಲ್ಲಿಸುವ ಮೊದಲು ಸರಿಯಾಗಿ ಪರಿಶೀಲಿಸುವುದರಿಂದ, ರಜಾ ಅವಧಿಯಲ್ಲಿ ವೇತನ ಪಾವತಿ ಮಾಡುವ ಉದಾಹರಣೆಗಳು ಕಂಡು ಬರುವುದಿಲ್ಲವೆಂದರು.<br><br>ಕುಲಸಚಿವರು ಮಾತನಾಡಿ, ವಾಣಿಜ್ಯಶಾಸ್ತ್ರ ವಿಷಯದ (ಸ್ನಾತಕ) ಕೆಲವು ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ 12 ಗಂಟೆಗಳ ಬೋಧನಾ ಕಾರ್ಯಭಾರದ ಆದೇಶ ನೀಡುವ ಬದಲು 04 ಮತ್ತು 08 ಗಂಟೆಗಳ ಆದೇಶ ಹೊರಡಿಸಲಾಗಿದೆ. ಇವರುಗಳಿಗೆ ಸದ್ಯದಲ್ಲೇ 12 ಗಂಟೆಗಳಂತೆ ಹಂಚಿಕೆ ಮಾಡಿ ಮರುಆದೇಶ ನೀಡಲಾಗುವುದು. ಹಾಗೆಯೇ, ಆಯಾ ಕಾಲೇಜು/ಸಂಸ್ಥೆ/ಕೇಂದ್ರ/ಅಧ್ಯಯನ ವಿಭಾಗದವರು ಅತಿಥಿ ಉಪನ್ಯಾಸಕರುಗಳ ವೇತನ ಹುಂಡಿಯನ್ನು ಹಣಕಾಸು ಅಧಿಕಾರಿಗಳಿಗೆ ಸಲ್ಲಿಸುವ ಮೊದಲು ಸರಿಯಾಗಿ ಪರಿಶೀಲಿಸಬೇಕು. ಎಲ್ಲಾ ವಿಭಾಗಕ್ಕೂ ಬೋಧನಾ ಕಾರ್ಯಭಾರದ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂದು ಒಂದುವರೆ ತಿಂಗಳ ಹಿಂದೆಯೇ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಇದರಲ್ಲಿ ಯಾವ ವಿಭಾಗದವರು ಬೋಧನಾ ಕಾರ್ಯಭಾರದ ವಿವರ ನೀಡಿರುವುದಿಲ್ಲವೋ, ಅಂತಹ ವಿಭಾಗದ ಅತಿಥಿ ಉಪನ್ಯಾಸಕರುಗಳಿಗೆ ಮಾತ್ರ ಆದೇಶ ನೀಡಿರುವುದಿಲ್ಲ. ಆ ವಿಭಾಗದವರು ಕಾರ್ಯಭಾರದ ವಿವರವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ್ದರೆ, ತರಗತಿಗಳು ಪ್ರಾರಂಭ/ತೆಗೆದುಕೊಂಡ ದಿನಾಂಕದಿಂದಲೇ ಆದೇಶ ನೀಡಲಾಗುವುದು ಎಂದರು.<br><br>ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಕಾರ್ಯಭಾರ ಪರಿಶೀಲನಾ ಸಮಿತಿಯವರು ಯಾವ ಯಾವ ವಿಭಾಗದಲ್ಲಿ ಮಾಹಿತಿಯನ್ನು ಪಡೆದಿದ್ದರೋ, ಅದರಲ್ಲಿ ಕೆಲವೊಂದು ವಿಭಾಗದಲ್ಲಿ ಕಾರ್ಯಭಾರದ ವರದಿಯನ್ನು ಮಾತ್ರ ಪಡೆದಿರುತ್ತಾರೆ. ಇದರೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅತಿಥಿ ಉಪನ್ಯಾಸಕರುಗಳ ಪ್ರಥಮವಾಗಿ ಕೆಲಸಕ್ಕೆ ವರದಿ ಮಾಡಿಕೊಂಡಿರುವ ದಿನಾಂಕವನ್ನು ಪಡೆಯುವುದು ಸೂಕ್ತ. ಕಾರ್ಯಭಾರ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯಲ್ಲಿ ಒಂದೆರೆಡು ವ್ಯತ್ಯಾಸವಾಗುವುದು ಸಹಜ. ಆದರೆ ವಿಭಾಗದ ಅಧ್ಯಕ್ಷರೇ ಕಿರಿಯ ಅತಿಥಿ ಉಪನ್ಯಾಸಕರುಗಳಿಗೆ ಹೆಚ್ಚು ಗಂಟೆಯ ಕಾರ್ಯಭಾರವನ್ನು ನೀಡಿ, ಹಿರಿಯ ಅತಿಥಿ ಉಪನ್ಯಾಸಕರುಗಳಿಗೆ ಕಡಿಮೆ ಗಂಟೆಯ ಕಾರ್ಯಭಾರವನ್ನು ನೀಡುವ ಮೂಲಕ ಪಕ್ಷಪಾತವೆಸಗಿದ್ದಾರೆ. ಇಂತಹ ಪ್ರಕರಣಗಳು ಕಾರ್ಯಭಾರ ಪರಿಶೀಲನಾ ಸಮಿತಿಯವರಿಗೂ ತಿಳಿದುಬಂದಿರುವುದಿಲ್ಲ. ಆದ್ದರಿಂದ ವಿಶ್ವವಿದ್ಯಾನಿಲಯವು ಕೆಲಸಕ್ಕೆ ಸೇರಿದ ದಿನಾಂಕದಿಂದ ಎಲ್ಲಾ ಮಾಹಿತಿಯನ್ನೊಳಗೊಂಡ ಒಂದು ನಮೂನೆಯನ್ನು ಸಿದ್ಧಪಡಿಸಿ, ಎಲ್ಲಾ ವಿಭಾಗದವರಿಂದ ಆ ನಮೂನೆಯಲ್ಲಿ ಮಾಹಿತಿ ಪಡೆಯುವುದರಿಂದ, ಕೆಲವು ಅತಿಥಿ ಉಪನ್ಯಾಸಕರುಗಳಿಗೆ 12 ಗಂಟೆಗಳ ಬೋಧನಾ ಕಾರ್ಯಭಾರದ ಆದೇಶ ನೀಡುವ ಬದಲು 04 ಮತ್ತು 08 ಗಂಟೆಗಳ ಆದೇಶ ಹೊರಡಿಸುವ ಪ್ರಮೇಯವಿರುವುದಿಲ್ಲ. ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜಿನಲ್ಲಿ "ಕೆಲಸಕ್ಕೆ ಸೇರಿದ ದಿನಾಂಕ" ಮಾಹಿತಿಯನ್ನು ಪಡೆದಿರುವುದಿಲ್ಲ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಮೇಲ್ಕಂಡ ಸಮಸ್ಯೆಗಳನ್ನು ಬಗೆಹರಿಸುವ ಸಂಬಂಧ ಕೂಡಲೇ ಒಂದು ವಿಶೇಷ ಸಮಿತಿಯನ್ನು ರಚಿಸಲಾಗುವುದು ಎಂದರು. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು/ಸಂಸ್ಥೆ/ಕೇಂದ್ರ/ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸಂಬಂಧಿಸಿದಂತೆ ಸಮಗ್ರವಾಗಿ ವಿಸ್ತೃತ ವರದಿ ಪಡೆಯಲು ಒಂದು ವಿಶೇಷ ಸಮಿತಿ ರಚಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2023/2.33 | ದಿವಂಗತ ಶ್ರೀ ಕೃಷ್ಣ, ರೋಡ್ ಇನ್ಸ್‌ಪೆಕ್ಟರ್ ಗ್ರೇಡ್-2, ಇಂಜಿನಿಯರ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಚಂದ್ರೇಗೌಡ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಶ್ರೀ ಚಂದ್ರೇಗೌಡ ಅವರಿಗೆ ಅನುಕಂಪದ ಆಧಾರದ ಮೇಲೆ ಸೇವಕ ಹುದ್ದೆಯಲ್ಲಿ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.34 | ದಿವಂಗತ ಡಾ. ಹೆಚ್.ಎಂ. ರಾಮಕೃಷ್ಣೇಗೌಡ, ಪ್ರಾಧ್ಯಾಪಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಹೆಚ್.ಆರ್. ಚಿರಾಗ್ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಶ್ರೀ ಹೆಚ್.ಆರ್.ಚಿರಾಗ್ ಅವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.35 | ದಿವಂಗತ ಶ್ರೀಮತಿ ಯಶೋದ ಹೆಚ್.ಎಂ., ಪರಿಚಾರಕಿ, ಸ್ನಾತಕ ಗ್ರಂಥಾಲಯ, ಮಹಾರಾಜ ಕಾಲೇಜು ಆವರಣ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಸ್ಪಂದನ್ ಎಂ. ಪಟೇಲ್ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ಶ್ರೀ ಸ್ಪಂದನ್ ಎಂ ಪಟೇಲ್ ಅವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯಲ್ಲಿ ನೇಮಕಾತಿ ಮಾಡಿಕೊಳ್ಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2023/5.36 | ಶ್ರೀ ಗಗನ್ ಕೆ.ಜೆ., ದ್ವಿತೀಯ ಎಂ.ಪಿ.ಎಡ್. ವಿದ್ಯಾರ್ಥಿ, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೀಡಿರುವ ದೂರಿನ ಸಂಬಂಧ ವಿಶ್ವವಿದ್ಯಾನಿಲಯದಿಂದ ರಚಿಸಿರುವ ಪರಿಶೀಲನಾ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ. |
| | ಕುಲಸಚಿವರು ಮಾತನಾಡಿ, ಗಗನ್.ಕೆ.ಜೆ, ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗದಲ್ಲಿ ಅಂತಿಮ ವರ್ಷದ ಎಂ.ಪಿ.ಎಡ್ ವ್ಯಾಸಂಗ ಮಾಡುತ್ತಿರುವ ಶ್ರೀ ಗಗನ್.ಕೆ.ಜೆ ಎಂಬ ವಿದ್ಯಾರ್ಥಿಯು ಡಾ.ಸಿ.ವೆಂಕಟೇಶ್, ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಶೈಕ್ಷಣಿಕವಾಗಿ ಹಾಗೂ ಮಾನಸಿಕವಾಗಿ ವೈಯಕ್ತಿಕವಾಗಿ ದೌರ್ಜನ್ಯ ಹಾಗೂ ದೈಹಿಕ ಹಲ್ಲೆ ಮಾಡಿದ್ದಾರೆಂದು ದಿನಾಂಕ: 09-09-2023ರಂದು ಬೆಳಗ್ಗೆ ಸುಮಾರು 10 ಗಂಟೆಯಿಂದ 10.30 ರ ಅವಧಿಯಲ್ಲಿ ಕ್ರಾಫರ್ಡ್ ಭವನದ ಮುಂದೆ ಕೆಲವು ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದು, ಅವನನ್ನು ಅವನ ಸಹಪಾಠಿ ವಿದ್ಯಾರ್ಥಿಗಳು ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಈ ಸಂಬಂಧ ವಾಸ್ತವಾಂಶಗಳನ್ನೊಳಗೊಂಡಂತೆ ಪ್ರಾಥಮಿಕ ವರದಿಯನ್ನು ಪಡೆಯಲಾಯಿತು. ಹಾಗೂ ವಿದ್ಯಾರ್ಥಿಯ ಪೋಷಕರು ಲಕ್ಷ್ಮೀಪುರಂ ಪೋಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಿರುತ್ತಾರೆ. ರಾಜ್ಯ ಕಾರ್ಯದರ್ಶಿಗಳು, ರಾಷ್ಟ್ರೀಯ ಮಾನವ ಹಕ್ಕುಗಳ ತನಿಖಾ ಸಮಿತಿ (ರಿ) ಮತ್ತು ರಾಜ್ಯ ಸಹ ಕಾರ್ಯದರ್ಶಿ, ಕದಂಬ ಸೈನ್ಯ ಕನ್ನಡ ಸಂಘಟನೆ (ನೋಂ) ಅವರುಗಳು ಡಾ. ಸಿ.ವೆಂಕಟೇಶ್ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಿ, ವಿದ್ಯಾರ್ಥಿಗೆ ನ್ಯಾಯ ಒದಗಿಸಬೇಕೆಂದು ವಿಶ್ವವಿದ್ಯಾನಿಲಯಕ್ಕೆ ಪತ್ರ ಬರೆದಿರುತ್ತಾರೆ. |

| | |
|---|---|
| | ಸದರಿ ಪ್ರಕರಣದ ಸಂಬಂಧ ಆಂತರಿಕ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು. ದಿನಾಂಕ: 13-09-2023ರಂದು ಆಂತರಿಕ ಪರಿಶೀಲನಾ ಸಮಿತಿಯವರು ಮುಚ್ಚಿದ ಲಕೋಟೆಯಲ್ಲಿ ವರದಿಯನ್ನು ಕುಲಸಚಿವರಿಗೆ ಸಲ್ಲಿಸಿರುತ್ತಾರೆ. ಈ ವರದಿಯನ್ನು ವಿಶ್ವವಿದ್ಯಾನಿಲಯದಲ್ಲಿ ಚಾಲ್ತಿಯಲ್ಲಿರುವ ಸಿಸಿಎ ಅಧಿನಿಯಮದೊಂದಿಗೆ ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲಾಗಿದೆಯೆಂದು ಸಭೆಗೆ ತಿಳಿಸಿದರು.<br><br>ಮಾನ್ಯ ಕುಲಪತಿ ಮತ್ತು ಕುಲಸಚಿವರು ಆಂತರಿಕ ಪರಿಶೀಲನಾ ಸಮಿತಿಯವರು ಮುಚ್ಚಿದ ಲಕೋಟೆಯಲ್ಲಿದ್ದ ವರದಿಯನ್ನು ಇದುವರೆವಿಗೂ ತೆರೆಯದಿರುವುದರಿಂದ ಕುಲಪತಿ ಆದೇಶಾನುಸಾರ ಕುಲಸಚಿವರು ಸಿಂಡಿಕೇಟ್ ಸಭೆಯಲ್ಲಿ ಲಕೋಟೆಯನ್ನು ತೆರೆದು, ಆಂತರಿಕ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಪೂರ್ಣ ವರದಿಯನ್ನು ಸಭೆಯ ಮುಂದೆ ಮಂಡಿಸಿದರು.<br><br>ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ಸಮಿತಿಯು 04 ವಿದ್ಯಾರ್ಥಿಗಳ ವಿಚಾರಣೆ ಮಾತ್ರ ಮಾಡಲಾಗಿದೆ. ಒಂದು ಕಡೆ ಡಾ. ಸಿ.ವೆಂಕಟೇಶ್ ವರದಿಯನುಸಾರ ಸಮಿತಿಯ ಮುಂದೆ ಇವರ ವಿರುದ್ಧವಾಗಿ ಹೇಳಿಕೆ ನೀಡಿರುವವರು ಪೋಷಕರು ಹಾಗೂ 04 ವಿದ್ಯಾರ್ಥಿಗಳು ಕುಲಸಚಿವರ ಸಮ್ಮುಖದಲ್ಲಿ ದೂರಿರುವ ಹಿನ್ನೆಲೆಯಲ್ಲಿ, ಕುಲಸಚಿವರು ಆಂತರಿಕ ಪರಿಶೀಲನಾ ಸಮಿತಿಯನ್ನು ರಚಿಸಿದರು.<br><br>ಡಾ. ಸಿ.ವೆಂಕಟೇಶ್ ಅವರು ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಗೆ ಕ್ರೀಡಾ ಮೈದಾನದಲ್ಲಿಯೇ ಎಲ್ಲರ ಮುಂದೆ ಹಲ್ಲೆ ಮಾಡುತ್ತಿದ್ದರು ಎಂದು ಸಮಿತಿಯ ಮುಂದೆ ವಿದ್ಯಾರ್ಥಿನಿಯು ಹೇಳಿಕೆ ನೀಡಿದ್ದು, ಆ ಸಂದರ್ಭದಲ್ಲಿ ಹಲ್ಲೆಯನ್ನು ಸುಮಾರು ವಿದ್ಯಾರ್ಥಿಗಳು ವೀಕ್ಷಿಸಿರುತ್ತಾರೆ. ಅದೇ ರೀತಿ ದಿನನಿತ್ಯ ನಿರಂತರವಾಗಿ ದೈಹಿಕವಾಗಿ, ಮಾನಸಿಕವಾಗಿ, ಶೈಕ್ಷಣಿಕವಾಗಿ ನನಗೆ ತುಂಬಾ ತೊಂದರೆ ನೀಡಿರುತ್ತಾರೆಂದು ವಿದ್ಯಾರ್ಥಿಯು ದೂರಿದ್ದಾರೆ. ಈ ರೀತಿ ನಡೆದಿದ್ದರೆ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ಅಧ್ಯಯನ ವಿಭಾಗದಲ್ಲಿರುವ ಎಲ್ಲಾ ಪ್ರಾಧ್ಯಾಪಕರುಗಳ ಹಾಗೂ ವಿದ್ಯಾರ್ಥಿಗಳ ಗಮನಕ್ಕೆ ಬಂದಿರುತ್ತದೆ. ಸಮಿತಿಯು ಸಮಗ್ರವಾಗಿ ಎಲ್ಲಾ ಪ್ರಾಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳಿಂದ ಹೇಳಿಕೆ ಪಡೆಯಬೇಕಿತ್ತು. ಕೇವಲ ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯ ಪೋಷಕರು ಮತ್ತು ಆತನ ಸ್ನೇಹಿತರಾದ 04 ವಿದ್ಯಾರ್ಥಿಗಳಿಂದ ಮಾತ್ರ ಹೇಳಿಕೆ ಪಡೆದಿರುವುದು ಲೋಪದೋಷ ಕಂಡು ಬಂದಿದೆ. ಏಕೆಂದರೆ ಅಪರಾಧಿಯನ್ನು ರಕ್ಷಣೆ ಮಾಡದಿದ್ದರೂ, ನಿರಪರಾಧಿಗೆ ಶಿಕ್ಷೆಯಾಗಬಾರದು ಎಂದು ಕಾನೂನಿನಲ್ಲಿರುವುದರಿಂದ, ಸಮಗ್ರವಾಗಿ ವಿಚಾರಣೆ ನಡೆಸಿದಾಗ, ಬಹುತೇಕರ ಅಭಿಪ್ರಾಯವು ಒಂದೇಯಾಗಿದ್ದಾಗ ಅರ್ಥವಿರುತ್ತದೆ. ವಿದ್ಯಾರ್ಥಿಯು ಆತ್ಮಹತ್ಯೆಗೆ ಪ್ರಯತ್ನಿಸಿದ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಮುಖ್ಯಸ್ಥರಾಗಿರುವ ಸನ್ಮಾನ್ಯ ಕುಲಪತಿ ಇರುವುದಿಲ್ಲ. ಆ ಸಂದರ್ಭದಲ್ಲಿ ಕುಲಸಚಿವರ ಕೆಲವು ಸೂಚನೆ ಮೇರೆಗೆ ಕಾನೂನ್ಮಾತ್ಮಕ ತನಿಖೆಯಾಗಿರುತ್ತದೆ. ಈ ತನಿಖೆಯು ಪೂರ್ಣ ಪ್ರಮಾಣದಲ್ಲಾಗಿರುವುದಿಲ್ಲವೆಂದ ಮೇಲ್ನೋಟಕ್ಕೆ ಕಂಡು ಬಂದಿದೆ. ಸದರಿ ವರದಿಯನ್ನೇ ತೀರ್ಮಾನವೆಂದು ಪರಿಗಣಿಸುವ ಬದಲು ಇನ್ನೊಂದು ಸಮಿತಿಯನ್ನು ರಚಿಸಿ ಎಲ್ಲಾ ಪ್ರಾಧ್ಯಾಪಕರುಗಳ ಮತ್ತು ವಿದ್ಯಾರ್ಥಿಗಳ ಹೇಳಿಕೆಯನ್ನು ಪಡೆದು ವರದಿ ಸಲ್ಲಿಸುವುದು ಸೂಕ್ತವೆಂದರು.<br><br>ಶ್ರೀ ಗೋಕುಲ ಗೋವರ್ಧನ್ ಮಾತನಾಡಿ, ಹಲ್ಲೆಗೊಳಗಾಗಿದ್ದ ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯು ಆಸ್ಪತ್ರೆಗೆ ದಾಖಲಾಗಿದ್ದರೆಂದು ಭಾವನಾತ್ಮಕವಾಗಿ ನೋಡುವ ವಿಚಾರ ಒಂದು ಭಾಗವಾದರೆ, ವಿದ್ಯಾರ್ಥಿಯ ಹಿನ್ನೆಲೆ, ಮನಸ್ಥಿತಿ ಮತ್ತು ಈ ಘಟನೆ ನಡೆಯಲು ಯಾರದೋ ಒತ್ತಡ/ಉದ್ದೇಶಕ್ಕಾಗಿ ನಡೆದಿದ್ದೆಯೇ ಎಂದು ಆಳವಾಗಿ ಪರಿಶೀಲಿಸಬೇಕು. ವಿದ್ಯಾರ್ಥಿಯು ತಿಳಿಸಿದ್ದ 04 ಸಹಪಾಠಿಯರ ಹೇಳಿಕೆಯನ್ನು ಮಾತ್ರ ಪಡೆದಿರುವುದು ಸರಿಯಲ್ಲ. ಈ ಘಟನೆಯ ಬಗ್ಗೆ ಹೇಳಿಕೆ ನೀಡಿರುವ 04 ವಿದ್ಯಾರ್ಥಿಗಳೊಂದಿಗೆ ವಿಭಾಗದಲ್ಲಿರುವ ಪ್ರಾಧ್ಯಾಪರುಗಳು, ಸಿಬ್ಬಂದಿವರ್ಗ ಮತ್ತು ಇತರೆ ವಿದ್ಯಾರ್ಥಿಗಳಿಂದಲೂ ಸಮಗ್ರವಾಗಿ ಹೇಳಿಕೆಯನ್ನು ಪಡೆದು ಸಮಿತಿಯು ವರದಿ ಸಲ್ಲಿಸಿದಾಗ ಮಾತ್ರ ಈ ವರದಿಯನ್ನು ಸಿಂಡಿಕೇಟ್ ಸಭೆಯ ತೀರ್ಮಾನವೆಂದು ಪರಿಗಣಿಸಬಹುದಾಗಿತ್ತು. ಆದ್ದರಿಂದ ಈ ಪ್ರಕರಣವನ್ನು ಮರು ತನಿಖೆ ಮಾಡಬೇಕೆಂದು ತಿಳಿಸಿದರು. |

| | |
|---|---|
| | ಜಂಟಿ ನಿರ್ದೇಶಕರು ಮಾತನಾಡಿ, ಆಂತರಿಕ ಪರಿಶೀಲನಾ ಸಮಿತಿಯವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ವರದಿಯನ್ನು ಪರಾಮರ್ಶಿಸಿದಾಗ, ವರದಿಯಂತೆ ಕ್ರಮ ತೆಗೆದುಕೊಳ್ಳುವ ಬದಲು ಇನ್ನೊಂದು ಸಮಿತಿ ರಚಿಸಿ ವಿಚಾರಣೆ ಮಾಡಬೇಕೆಂದು ತಿಳಿಸಿದರು.<br><br>ಕುಲಪತಿಗಳು ಮಾತನಾಡಿ, ಶ್ರೀ ಗಗನ್.ಕೆ.ಜೆ ವಿದ್ಯಾರ್ಥಿಯು ಆತ್ಮಹತ್ಯೆಗೆ ಪ್ರಯತ್ನಿಸಿದ ದಿನವು ಸಾರ್ವತ್ರಿಕ ರಜಾ ದಿನವಾಗಿರುತ್ತದೆ. ಸೆಕ್ಯೂರಿಟಿ ಗಾರ್ಡ್‌ಗಳನ್ನು ಹೊರತುಪಡಿಸಿದರೆ, ವಿಶ್ವವಿದ್ಯಾನಿಲಯದ ಅಧಿಕಾರಿಗಳು ಹಾಗೂ ಉದ್ಯೋಗಿಗಳು ಯಾರು ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಕ್ರಾಫರ್ಡ್ ಭವನದಲ್ಲಿಯೇ ಸ್ವತಃ ವಿಡಿಯೋ ಮಾಡಿ ಆತ್ಮಹತ್ಯೆಗೆ ಪ್ರಯತ್ನಿಸಿರುವುದು ಕಂಡು ಬಂದಿದೆ. ಇವುಗಳನ್ನೆಲ್ಲ ಒಳಗೊಂಡಂತೆ ಸಮಗ್ರವಾಗಿ ವಿಚಾರಣೆ ನಡೆಸಲು ಒಂದು ಪರಿಷ್ಕೃತ ಸಮಿತಿ ರಚಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಶ್ರೀ ಗಗನ್ ಕೆ.ಜೆ., ದ್ವಿತೀಯ ಎಂ.ಪಿ.ಎಡ್. ವಿದ್ಯಾರ್ಥಿ, ದೈಹಿಕ ಶಿಕ್ಷಣ ಹಾಗೂ ಕ್ರೀಡಾ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ನೀಡಿರುವ ದೂರು ಹಾಗೂ ಆತ್ಮಹತ್ಯೆಗೆ ಪ್ರಯತ್ನಿಸಿರುವ ಪ್ರಕರಣದ ಸಂಬಂಧ ಸಮಗ್ರವಾಗಿ ವಿಚಾರಣೆ ನಡೆಸಲು ಈ ಕೆಳಕಂಡವರನ್ನೊಳಗೊಂಡಂತೆ ಪರಿಷ್ಕೃತ ಸಮಿತಿ ರಚಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.<br>* ಪ್ರೊ. ಸೋನೆರ್ ನಂದಪ್ಪ, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ – ಅಧ್ಯಕ್ಷರು<br>* ಪ್ರೊ. ಎಂ.ಜಿ.ಮಂಜುನಾಥ, ಡೀನರು, ಕಲಾ ನಿಕಾಯ – ಸದಸ್ಯರು<br>* ಪ್ರೊ. ಎನ್.ನಾಗರಾಜ, ನಿರ್ದೇಶಕರು, ಪಿ.ಎಂ.ಇ.ಬಿ. – ಸದಸ್ಯರು<br>* ಡಾ. ಟಿ.ಆರ್.ಚಂದ್ರಶೇಖರ್, ಸಿಂಡಿಕೇಟ್ ಸದಸ್ಯರು – ಸದಸ್ಯರು<br>* ಶ್ರೀ ಗೋಕುಲ್ ಗೋವರ್ಧನ್, ಸಿಂಡಿಕೇಟ್ ಸದಸ್ಯರು – ಸದಸ್ಯರು<br>* ಶ್ರೀ ಚಂದ್ರಯ್ಯ.ಟಿ, ವಿಶೇಷಾಧಿಕಾರಿಗಳು, ಪಿಹೆಚ್.ಡಿ (ಮೌಲ್ಯಮಾಪನ) – ಸದಸ್ಯರು<br>* ಡಾ. ಬಿ.ಎಸ್.ಚಂದ್ರಶೇಖರ್, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ – ಸದಸ್ಯರು |
| ಸಾಮಾನ್ಯ ಸಭೆ 2023/5.37 | ರಾಷ್ಟ್ರೀಯ ಶಿಕ್ಷಣ ನೀತಿ–2020 (NEP) ಅನುಸಾರ Regulations Governing the Choice Based Credit System Semester Scheme with Multiple Entry and Exit Options in the Undergraduate and Post-graduate Degree Programsನ ಕರಡು ವಿನಿಯಮಾವಳಿಯ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/5.38 | ಅತಿಥಿ ಗೃಹದ ವಾಸ್ತವ್ಯಕ್ಕೆ ವಿದ್ಯಾರ್ಥಿಗಳಿಗೆ ದರ ನಿಗದಿಪಡಿಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/5.39 | ಡಾ. ಜಿ. ಸುಬ್ರಹ್ಮಣ್ಯ, ನಿವೃತ್ತ ಪ್ರಾಧ್ಯಾಪಕರು ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು. |
| ಸಾಮಾನ್ಯ ಸಭೆ 2023/5.40 | ಶ್ರೀ ಮಲ್ಲಿನಾಥ್ ಪ್ರಸಾದ್, ನಿವೃತ್ತ ಪ್ರೋಗ್ರಾಮರ್, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ತಡೆಹಿಡಿದಿರುವ ಯುಜಿಸಿ 7ನೇ ವೇತನ / ನಿವೃತ್ತಿ ಸೌಲಭ್ಯಗಳನ್ನು ಬಿಡುಗಡೆ ಮಾಡುವ ಬಗ್ಗೆ. |
| ತೀರ್ಮಾನ | ಮುಂದೂಡಲಾಯಿತು |

| ಸಾಮಾನ್ಯ ಸಭೆ 2023/5.41 | ದಿನಾಂಕ: 06-11-2023ರಂದು ನಡೆದ ಮೊದಲನೇ ಕ್ರೀಡಾ ಸಮಿತಿಯ ನಡವಳಿಯನ್ನು ಅನುಮೋದಿಸುವ ಬಗೆಗೆ. |
|---|---|
| ತೀರ್ಮಾನ | ಅನುಮೋದಿಸಲಾಯಿತು. |

ಇತರೆ ವಿಷಯಗಳು:

1. ಕುಲಪತಿಗಳು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರವೇಶಾತಿ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಡೆಸ್ಕ್, ಮೇಜು ಹಾಗೂ ಕುರ್ಚಿಗಳು ಅವಶ್ಯಕತೆನುಗುಣವಾಗಿ ಇರುವುದಿಲ್ಲ. ಆದ್ದರಿಂದ ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿದ್ದಲ್ಲಿ, ಇ-ಟೆಂಡರ್ ಮುಖಾಂತರ ಡೆಸ್ಕ್, ಮೇಜು ಹಾಗೂ ಕುರ್ಚಿಗಳನ್ನು ಖರೀದಿ ಮಾಡಲಾಗುವುದು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.

   ಮೈಸೂರು ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ಕಾಲೇಜಿಗೆ ಅವಶ್ಯಕತೆಗನುಗುಣವಾಗಿ ಡೆಸ್ಕ್, ಮೇಜು ಹಾಗೂ ಕುರ್ಚಿಗಳನ್ನು ಇ-ಟೆಂಡರ್ ಮುಖಾಂತರ ಖರೀದಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

2. ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನೀಡಿದ್ದ ಸನ್ಮಾನ ಸಮಾರಂಭವನ್ನು ಮುಗಿಸಿಕೊಂಡು ಸಂಜೆ 4.00 ಗಂಟೆಗೆ ಮಾನಸಗಂಗೋತ್ರಿ ಮೂಲಕ ಹೊರಡುತ್ತಿದ್ದಾಗ, Clock Tower ನೋಡಿದ್ದಾಗ ಆಶ್ಚರ್ಯವಾಯಿತು. ಏಕೆಂದರೆ ಸಂಜೆ 4.00 ಗಂಟೆ ಬದಲು ಬೆಳಗ್ಗೆ 11.00 ಗಂಟೆ ತೋರಿಸುತ್ತಿತ್ತು. ಮಾನಸಗಂಗೋತ್ರಿಯಲ್ಲಿ ವಿದ್ಯಾರ್ಥಿಗಳು, ಸಾರ್ವಜನಿಕರು, ವಿದೇಶಿಯರು ಹಾಗೂ ಪ್ರವಾಸಿಗರು ಭೇಟಿ ನೀಡುವ ಸ್ಥಳವಾಗಿದೆ. ಆದ್ದರಿಂದ ಕೂಡಲೇ Clock Tower ನಲ್ಲಿ ಸರಿಯಾದ ಸಮಯಕ್ಕೆ set ಮಾಡಬೇಕೆಂದು ಇಂಜಿನಿಯರ್ ವಿಭಾಗದ ಗಮನಕ್ಕೆ ತಂದರೂ ಸಹ ಇದುವರೆವಿಗೂ ಸರಿಪಡಿಸಿರುವುದಿಲ್ಲ. ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಇನ್ನು ಟೈಲ್ಸ್ ಹಾಕಿರುವುದಿಲ್ಲ ಮತ್ತು ವಿವಿ ಅತಿಥಿಗೃಹವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಇದನ್ನೆಲ್ಲಾ ಗಮನಿಸಿದರೆ ಕೆಲಸ ಕಾರ್ಯಗಳಲ್ಲಿ ನಿಷ್ಕ್ರಿಯತೆ ಎದ್ದು ಕಾಣುತ್ತದೆ ಎಂದರು.

   ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ವಿಶ್ವವಿದ್ಯಾನಿಲಯದ ಅನೇಕ ಆದಾಯದ ಮೂಲವಾಗಿರುವುದರಲ್ಲಿ ಸ್ಟೇಡಿಯಂ ಮತ್ತು ಈಜುಕೊಳ ಸಹ ಒಂದಾಗಿದೆ. ಇವುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡುವುದರೊಂದಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿದ್ದಲ್ಲಿ, ವಿಶ್ವವಿದ್ಯಾನಿಲಯಕ್ಕೆ ವರಮಾನ ಬರುತ್ತದೆ. ಇಂಡೋ ಸ್ಟೇಡಿಯಂನಲ್ಲಿ ಒಟ್ಟು 08 ಮಂದಿ ಜೈನ ಸಮುದಾಯದವರು ಪ್ರತಿ ನಿತ್ಯ shuttlecock ಆಡುತ್ತಿದ್ದರು. ಮಾಹೆಯಾನ ತಲಾ ರೂ.1,500/- ಗಳನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸುತ್ತಿದ್ದರು. ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉದ್ಯೋಗಿಯು ನಾನು ಇವತ್ತು ಸ್ಟೇಡಿಯಂಗೆ ಬರುವುದಿಲ್ಲ ಹಾಗೂ ಬೀಗವನ್ನು ತೆಗೆಯುವುದಿಲ್ಲವೆಂದು ಒರಟಾಗಿ ವರ್ತಿಸಿದ ಹಿನ್ನೆಲೆಯಲ್ಲಿ ಅವರುಗಳು ಸ್ಟೇಡಿಯಂಗೆ ಬರುವುದನ್ನೆ ನಿಲ್ಲಿಸಿದರು. ಆ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಆದಾಯವು ಸ್ಥಗಿತವಾಯಿತು. ಹಾಗೆಯೇ, ಡಾಕ್ಟರ್‌ರೊಬ್ಬರು ಕೆಲವು ಕಡೆ ಬೋರ್‌ವೆಲ್ ನೀರಿನ ಈಜುಕೊಳವಿರುತ್ತದೆ. ಆದರೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಈಜುಕೊಳವು ಕಾವೇರಿ ನೀರಿನಿಂದ ಕೂಡಿದ್ದು ಉತ್ತಮವಾಗಿದೆ. ಆದರೂ ಸಣ್ಣ ಪ್ರಮಾಣದ ಕಾಮಗಾರಿಯನ್ನು ಇದುವರೆವಿಗೂ ಪೂರ್ಣಗೊಂಡಿಲ್ಲದೆ ಉಪಯೋಗಕ್ಕೆ ಬಂದಿರುವುದಿಲ್ಲವೆಂದು ಸಾರ್ವಜನಿಕ ಸ್ಥಳದಲ್ಲಿ ಪ್ರಸ್ತಾಪಿಸುತ್ತಿದ್ದರು. ಇಂತಹ ಸಣ್ಣ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಸುವುದರಿಂದ, ವಿಶ್ವವಿದ್ಯಾನಿಲಯಕ್ಕೆ ಆದಾಯ ಬರುತ್ತದೆ.

   ಕುಲಪತಿಗಳು ಮಾತನಾಡಿ, ಈಜುಕೊಳದ ಕಾಮಗಾರಿ ಬಗ್ಗೆ ಕಾರ್ಯಪಾಲಕ ಅಭಿಯಂತರರ ಗಮನಕ್ಕೆ ತಂದು ಕೂಡಲೇ ಪೂರ್ಣಗೊಳಸಬೇಕೆಂದು ತಿಳಸಿದಾಗ, 05 ದಿನದೊಳಗೆ ಪೂರ್ಣಗೊಳಸುತ್ತೇನೆಂದು ತಿಳಸಿ, ಇದುವರೆವಿಗೂ ಯಾವ ಪ್ರಕ್ರಿಯೆಯನ್ನು ಕೈಗೊಂಡಿರುವುದಿಲ್ಲ. ಈಜುಕೊಳದಲ್ಲಿ ಅಳವಡಿಸಲಾಗಿರುವ Water Purifier 1.5 ಕೋಟಿ ರೂ.ಗಳಾಗಿದ್ದು, ನಿರಂತರವಾಗಿ ಉಪಯೋಗಿಸದಿದ್ದಲ್ಲಿ ಹಾಳಾಗುತ್ತದೆ ಹಾಗೂ ಈಜುಕೊಳದ ಕಾಮಗಾರಿಯನ್ನು 08 ತಿಂಗಳುಗಳಿಂದ

ಇನ್ನು ಪೂರ್ಣಗೊಳಿಸಿರುವುದಿಲ್ಲ. ಕಾರ್ಯಪಾಲಕ ಅಭಿಯಂತರರು ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡಬೇಕೆಂದು ಒಂದುವರೆ ತಿಂಗಳ ಹಿಂದೆಯೇ ಮನವಿಯನ್ನು ಸಲ್ಲಿಸುತ್ತಾರೆ. ಇವರು ಸರಿಯಾಗಿ ವಿಭಾಗಕ್ಕೂ ಬರುವುದಿಲ್ಲ ಮತ್ತು ಪ್ರತಿ ಕೆಲಸಕಾರ್ಯದ ಬಗ್ಗೆ ನಿರಾಸಕ್ತಿ ಹೊಂದಿರುವುದು ಕಂಡು ಬಂದಿರುತ್ತದೆ. ಈ ಸಂದರ್ಭದಲ್ಲಿ Clock Tower ಕಡೆಯಾಗಲೀ, ಸಣ್ಣ ಕಾಮಗಾರಿಗಳ ಕಡೆ ಗಮನಹರಿಸುವುದಿಲ್ಲ.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಈ ಅಂಶಗಳನ್ನೆಲ್ಲಾ ಪರಿಶೀಲಿಸಿದ್ದರೆ ಕಾರ್ಯಪಾಲಕ ಅಭಿಯಂತರರನ್ನು ಕೂಡಲೇ ವಿಶ್ವವಿದ್ಯಾನಿಲಯದ ಕರ್ತವ್ಯದಿಂದ ಬಿಡುಗಡೆ ಮಾಡಿ, ವಿಶ್ವವಿದ್ಯಾನಿಲಯದ ಆಡಳಿತವನ್ನು ಚುರುಕುಗೊಳಿಸುವ ಇಂಜಿನಿಯರ್ ನಿಯೋಜಿಸಿಕೊಳ್ಳುವುದು ಸೂಕ್ತವೆಂದರು.

ಅಂತಿಮವಾಗಿ, ಶ್ರೀ ಆರ್. ಪ್ರತಾಪ್, ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಸ್ವಯಂವೇದ್ಯ ಮನವಿಯನ್ನು ಪರಿಗಣಿಸಿ ಈ ತಕ್ಷಣದಿಂದಲೇ ಜಾರಿಗೆ ಬಂದಂತೆ ಕರ್ತವ್ಯದಿಂದ ಬಿಡುಗಡೆಗೊಳಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.

3. ಕುಲಪತಿಗಳು ಮಾತನಾಡಿ, ಕ್ರೀಡಾ ಸಮಿತಿಯಲ್ಲಿ ಮಂಡಿಸಿದ Budget ಗೆ ಸಭೆಯು ಅನುಮೋದನೆ ನೀಡಿ, ಹಿಂದಿನ ಸಾಲಿನಲ್ಲಿ ಮಂಜೂರು ಮಾಡಿರುವ ಅನುದಾನ ಮೊತ್ತದಷ್ಟೇ, ಈ ವರ್ಷವೂ ಅನುದಾನವನ್ನು ಮಂಜೂರು ಮಾಡಬೇಕೆಂದು ಹಣಕಾಸು ಅಧಿಕಾರಿಗಳಿಗೆ ತಿಳಿಸಿದರು.

ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರುವ ಕ್ರೀಡಾ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಭರಿಸುವ ಕೆಲವೊಂದು ಖರ್ಚುಗಳನ್ನು ಸ್ವತಃ ಪಾವತಿಸಿದ ಮೊತ್ತದಿಂದ ಭರಿಸುತ್ತಿದ್ದವೆಂದು ಹೇಳಿಕೊಂಡಿರುವ ಹಿನ್ನೆಲೆಯಲ್ಲಿ, ಕೂಡಲೇ ಕ್ರೀಡಾ ಚಟುವಟಿಕೆಗಳ Budgetಗೆ ಅನುಮೋದನೆ ನೀಡುವುದರಿಂದ ಕ್ರೀಡಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂದರು.

ಸಿಂಡಿಕೇಟ್ ಸಭೆಯು ಕ್ರೀಡಾ ಸಮಿತಿಯಲ್ಲಿ ಮಂಡಿಸಲಾಗಿರುವ Budgetನ್ನು ಅನುಮೋದಿಸಲು ನಿರ್ಣಯಿಸಿತು.

4. ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಡಾ. ಪ್ರಭು, ಸಹ ಪ್ರಾಧ್ಯಾಪಕರು ಇವರು ವಯೋನಿವೃತ್ತಿಗೆ 03 ತಿಂಗಳು ಮಾತ್ರವಿರುವುದರಿಂದ, ಯುಜಿಸಿ ನಿಯಮಗಳನ್ವಯ ಸಿಎಎಸ್ ಅಡಿಯಲ್ಲಿ ಪ್ರಾಧ್ಯಾಪಕರಾಗಿ ಪದೋನ್ನತಿ ನೀಡಬೇಕೆಂದು ಕೋರಿರುತ್ತಾರೆ ಹಾಗೂ ವಿಶ್ವವಿದ್ಯಾನಿಲಯವು ಎರಡುವರೆ ವರ್ಷದಿಂದ ಪ್ರವೇಶ ಪರೀಕ್ಷೆ ನಡೆಸದಿದ್ದರಿಂದ ಪಿಹೆಚ್.ಡಿ ಮಾಡುವ ಅವಕಾಶದಿಂದ ವಂಚಿತರಾಗಿದ್ದೇವೆಂದು ವಿದ್ಯಾರ್ಥಿಗಳು ಮನವಿ ಸಲ್ಲಿಸಿರುತ್ತಾರೆ ಎಂದರು.

ಕುಲಸಚಿವರು ಮಾತನಾಡಿ, ಲೆಕ್ಕಪತ್ರಗಳ ಸಮಿತಿ ಸಭೆಯಲ್ಲಿ ಆಂಟಿಕ್ವಿಟಿ ಅಸಿಸ್ಟಂಟ್ ಕಾರ್ಯನಿರ್ವಹಿಸುತ್ತಿದ್ದವರಿಗೆ ವಿಶ್ವವಿದ್ಯಾನಿಲಯವು ಪದೋನ್ನತಿ ನೀಡಿರುವುದನ್ನು ಹಿಂಪಡೆಯಬೇಕೆಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ. ಇದರಲ್ಲಿ ಡಾ. ಪ್ರಭು ಸಹ ಒಬ್ಬರಾಗಿದ್ದರು. ಪದೋನ್ನತಿ ನೀಡಿರುವ ಸಂಬಂಧ ವಿಶ್ವವಿದ್ಯಾನಿಲಯವು ರಚಿಸಿಕೊಂಡಿರುವ ಅಧಿನಿಯಮ ಹಾಗೂ ದಾಖಲಾತಿಗಳನ್ನು ಸಮಿತಿಗೆ ಸಲ್ಲಿಸುವ ಮೂಲಕ ವಿಷಯವನ್ನು ಮುಂದೂಡಲಾಗಿದೆ. ಒಂದು ವೇಳೆ ಡಾ. ಪ್ರಭು ಅವರಿಗೆ ಪದೋನ್ನತಿ ನೀಡಿ ಸೌಲಭ್ಯಗಳನ್ನು ವಿಸ್ತರಿಸಿದ್ದರೆ, ಸಿಎಜಿ ಆಡಿಟ್/ಲೆಕ್ಕಪತ್ರಗಳ ಸಮತಿಯವರು ಮುಂದಿನ ದಿನಗಳಲ್ಲಿ ಕುಲಸಚಿವ ಮತ್ತು ಹಣಕಾಸು ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುತ್ತಾರೆಂದು ಸ್ಪಷ್ಟೀಕರಿಸಿದರು.

5. ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ಡಾ.ಉಮಕಾಂತ್, ಡಾ.ಕುಮಾರ್ ಸೇರಿದಂತೆ 5-6 ಅಧ್ಯಾಪಕರುಗಳಿಗೆ ಪ್ರಾಧ್ಯಾಪಕರ ಹುದ್ದೆಗೆ ಪದೋನ್ನತಿ ನೀಡುವುದು ಬಾಕಿ ಇರುವ ಬಗ್ಗೆ ಸ್ಪಷ್ಟಿಕರಣ ಕೋರಿದರು.

ಈ ಸಂಬಂಧ ಕುಲಪತಿ ಹಾಗೂ ಕುಲಸಚಿವರು ಮಾತನಾಡಿ, ಸರ್ಕಾರದ ಅನುಮೋದನೆಯೊಂದಿಗೆ Board ರಚಿಸಬೇಕು ಎಂದರು.

6. ಸರ್ ಎಂ.ವಿ. ಸ್ನಾತಕೋತ್ತರ ಕೇಂದ್ರ, ಮಂಡ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳು ಹಾಗೂ ಅತಿಥಿ ಉಪನ್ಯಾಸಕರುಗಳು ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ವೇತನ ಪಾವತಿಸಿಕೊಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಮೂರು ತಿಂಗಳಿಂದ ವೇತನ ಪಾವತಿ ಮಾಡದಿರುವುದಕ್ಕೆ ಕಾರಣವೇನೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಕುಲಸಚಿವರು ಮಾತನಾಡಿ, ಸರ್ಕಾರಿ ಆದೇಶ ಸಂಖ್ಯೆ: ಇಡಿ 81 ಯುಎನ್ಇ 2022, ಬೆಂಗಳೂರು ದಿನಾಂಕ: 05-11-2022 ರನ್ವಯ ನೂತನ ವಿಶ್ವವಿದ್ಯಾಲಯಗಳ ಕೇಂದ್ರ ಸ್ಥಾನವಾಗಿ ಪರಿವರ್ತನೆಗೊಂಡಿರುವ ಸ್ನಾತಕೋತ್ತರ ಕೇಂದ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಗಳು ಆಯಾ ಸ್ನಾತಕೋತ್ತರ ಕೇಂದ್ರಗಳಲ್ಲಿಯೇ ಕರ್ತವ್ಯ ನಿರ್ವಹಿಸತಕ್ಕದೆಂದು ನಿರ್ದೇಶಿಸಿರುವುದರಿಂದ, ಬೋಧಕೇತರ ಸಿಬ್ಬಂದಿಯವರಿಗೆ ಸ್ನಾತಕೋತ್ತರ ಕೇಂದ್ರ ಮಂಡ್ಯ ವತಿಯಿಂದ ವೇತನ ಪಾವತಿಸಬೇಕಾಗುತ್ತದೆಂದು ಸ್ಪಷ್ಟೀಕರಣ ನೀಡಿದರು.

ಕುಲಪತಿಗಳು ಮಾತನಾಡಿ, ಸ್ನಾತಕೋತ್ತರ ಕೇಂದ್ರದಲ್ಲಿರುವ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳು ಆಯಾ ಕೇಂದ್ರದಲ್ಲಿಯೇ ಕಾರ್ಯನಿರ್ವಹಿಸಬೇಕೆಂದು ಸರ್ಕಾರವು ಆದೇಶಿಸಿರುವ ಹಿನ್ನೆಲೆಯಲ್ಲಿ, ತಾತ್ಕಾಲಿಕ ಬೋಧಕೇತರ ಉದ್ಯೋಗಿಗಳಿಗೆ ಆಯಾ ಸ್ನಾತಕೋತ್ತರ ಕೇಂದ್ರ/ ವಿಶ್ವವಿದ್ಯಾನಿಲಯದವರೇ ವೇತನ ನೀಡಬೇಕು. ಅತಿಥಿ ಉಪನ್ಯಾಸಕರುಗಳಿಗೆ ಪ್ರಸಕ್ತ ಸಾಲಿನಲ್ಲಿ ಮಾತ್ರ ವೇತನ ಪಾವತಿಸಲಾಗುವುದು. ಮುಂದಿನ ಶೈಕ್ಷಣಿಕ ಸಾಲಿನಿಂದ ಆಯಾ ವಿಶ್ವವಿದ್ಯಾನಿಲಯದವರೇ ವೇತನ ಪಾವತಿಸಬೇಕೆಂದರು.

ಡಾ. ಟಿ.ಆರ್.ಚಂದ್ರಶೇಖರ್ ಮತ್ತು ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ, ಪ್ರತಿ ಸಿಂಡಿಕೇಟ್ ಸಭೆಯ ಕಾರ್ಯಸೂಚಿಯನ್ನು ಸಭೆಯ ದಿನಾಂಕ ನಿಗದಿಪಡಿಸಿರುವ 3-5 ದಿನಗಳ ಮುಂಚೆಯೇ ಎಲ್ಲಾ ಸದಸ್ಯರುಗಳಿಗೆ ಕಾರ್ಯಸೂಚಿಯನ್ನು ರವಾನಿಸುವುದರಿಂದ, ಕಾರ್ಯಸೂಚಿಗಳನ್ನು ಅಧ್ಯಯನ ಮಾಡಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಬಹುದೆಂದು ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ ಕುಲಸಚಿವರು ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಲಹೆ ಹಾಗೂ ನಿರ್ಣಯಗಳನ್ನು ನೀಡಿರುವ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಸದಸ್ಯ ಕಾರ್ಯದರ್ಶಿ ಹಾಗೂ ಕುಲಸಚಿವ

ಅಧ್ಯಕ್ಷರು ಹಾಗೂ ಕುಲಪತಿ